# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶನಿವಾರ, ಫೆಬ್ರವರಿ 19, 2022

ಸಂಪುಟ : 48 ಸಂಚಿಕೆ : 280 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com




ದಾವಣಗೆರೆ ಹೈಸ್ಕೂಲ್ ಮೈದಾನದಲ್ಲಿ ಆರಂಭವಾದ ಕೃಷಿ ಮೇಳ ವೀಕ್ಷಿಸಿದ ಗಣ್ಯರು

# 38 ಜನರಿಗೆ ಮರಣ ದಂಡನೆ

## ಅಹಮದಾಬಾದ್ ಸರಣಿ ಸ್ಫೋಟ ಪ್ರಕರಣದಲ್ಲಿ ಕೋರ್ಟ್ ತೀರ್ಪು

ಅಹಮದಾಬಾದ್, ಫೆ. 18 - 2008ರ ಅಹಮದಾಬಾದ್ ಸರಣಿ ಸ್ಫೋಟಗಳಿಗೆ ಸಂಬಂಧಿಸಿದಂತೆ ಇಲ್ಲಿನ ವಿಶೇಷ ನ್ಯಾಯಾಲಯ 38 ದೋಷಿಗಳಿಗೆ ಮರಣ ದಂಡನೆ ಹಾಗೂ 11 ಇತರರಿಗೆ ಜೀವಾವಧಿ ಶಿಕ್ಷೆ ವಿಧಿಸಿದೆ. ಸ್ಫೋಟಗಳಲ್ಲಿ 56 ಜನ ಸಾವನ್ನಪ್ಪಿದ್ದರು ಹಾಗೂ 200ಕ್ಕೂ ಹೆಚ್ಚು ಜನ ಗಾಯಗೊಂಡಿದ್ದರು.

ಸ್ಫೋಟ ಸಂಭವಿಸಿದ ಸುಮಾರು 14 ವರ್ಷಗಳ ನಂತರ ನ್ಯಾಯಮೂರ್ತಿ ಎ.ಆರ್. ಪಟೇಲ್ ಅವರು ಶಿಕ್ಷೆಯ ಪ್ರಮಾಣ ಪ್ರಕಟಿಸಿದ್ದಾರೆ. ಫೆಬ್ರವರಿ 8ರಂದು ತೀರ್ಪು ನೀಡಿದ್ದ ನ್ಯಾಯಾಲಯ, 49 ಜನರು ದೋಷಿಗಳು ಎಂದು ತಿಳಿಸಿತ್ತು ಹಾಗೂ 28 ಜನರನ್ನು ಖುಲಾಸೆಗೊಳಿಸಿತ್ತು.

ಜುಲೈ 26, 2008ರಲ್ಲಿ 70 ನಿಮಿಷಗಳ ಅವಧಿಯಲ್ಲಿ 21 ಸ್ಫೋಟಗಳು ಸಂಭವಿಸಿದ್ದವು.


7 ಸಾವಿರ ಪುಟಗಳ ತೀರ್ಪು ನೀಡಿರುವ ನ್ಯಾಯಾಲಯ, ಈ ಪ್ರಕರಣ ಅಪರೂಪದಲ್ಲಿ ಅಪರೂಪದ್ದು ಎಂದು ಹೇಳಿದೆ. 38 ದೋಷಿಗಳಿಗೆ ಮರಣ ದಂಡನೆ ಹಾಗೂ 11 ಇತರರಿಗೆ ಜೀವಾವಧಿ ಶಿಕ್ಷೆ ವಿಧಿಸಿದೆ ಎಂದು ಪಬ್ಲಿಕ್ ಪ್ರಾಸಿಕ್ಯೂಟರ್ ಅರವಿಂದ ಪಟೇಲ್ ಹೇಳಿದ್ದಾರೆ.

ಪ್ರಕರಣವೊಂದರಲ್ಲಿ ಅತಿ ಹೆಚ್ಚು ಜನರಿಗೆ ಮರಣ ದಂಡನೆಯಾದ ಪ್ರಕರಣ ಇದಾಗಿದೆ. ಈ ಹಿಂದೆ 26 ಜನರಿಗೆ ಮರಣ ದಂಡನೆಯಾಗಿತ್ತು. ಇಂದು ಮರಣದಂಡನೆಗೆ ಗುರಿಯಾದವರ ಸಂಖ್ಯೆ 38 ಆಗಿದೆ ಎಂದು ಪಬ್ಲಿಕ್ ಪ್ರಾಸಿಕ್ಯೂಟರ್ ಹೇಳಿದ್ದಾರೆ.

48 ದೋಷಿಗಳಿಗೆ ನ್ಯಾಯಾಲಯ 2.85 ಲಕ್ಷ ರೂ.ಗಳ ದಂಡ ಹಾಗೂ ಇನ್ನೋರ್ವನಿಗೆ 2.88 ಲಕ್ಷ ರೂ.ಗಳ ದಂಡ ವಿಧಿಸಿದೆ. ಸ್ಫೋಟದಲ್ಲಿ ಮೃತರ ಕುಟುಂಬದವರಿಗೆ ಲಕ್ಷ ರೂ. ಹಾಗೂ ತೀವ್ರವಾಗಿ ಗಾಯಗೊಂಡವರಿಗೆ 50 ಸಾವಿರ ರೂ. ಮತ್ತು ಸಣ್ಣ ಗಾಯಗಳಾದವರಿಗೆ 25 ಸಾವಿರ ರೂ.ಗಳ ಪರಿಹಾರ ನೀಡಲಾಗಿದೆ.

ಸಫ್ದರ್ ನಗೋರಿ, ಖಯಾಮುದ್ದೀನ್ ಕಪಾಡಿಯ, ಜಹೀದ್ ಶೇಖ್, ಖಮರುದ್ದೀನ್ ನಗೋರಿ ಹಾಗೂ ಷಮ್ಸುದ್ದೀನ್ ಶೇಖ್ ಮತ್ತಿತರರು ಮರಣ ದಂಡನೆಗೆ (2ನೇ ಪುಟಕ್ಕೆ)

**2008ರಲ್ಲಿ ನಡೆದ ಸರಣಿ ಸ್ಫೋಟಗಳಲ್ಲಿ 56 ಜನ ಸಾವನ್ನಪ್ಪಿದ್ದರು ಹಾಗೂ 200ಕ್ಕೂ ಹೆಚ್ಚು ಜನ ಗಾಯಗೊಂಡಿದ್ದರು.**



**ಅತಿ ಹೆಚ್ಚು ಜನರಿಗೆ ಮರಣದಂಡನೆಯಾದ ಪ್ರಕರಣ ಇದಾಗಿದೆ.**

**ಈ ಹಿಂದೆ 26 ಜನರಿಗೆ ಮರಣದಂಡನೆಯಾಗಿತ್ತು.**

## ಒಂದು ಬಾರಿ ಬಳಕೆಯ ಪ್ಲಾಸ್ಟಿಕ್ ನಿಷೇಧಕ್ಕೆ ಮಾರ್ಗಸೂಚಿ ಪ್ರಕಟ

ನವದೆಹಲಿ, ಫೆ. 18 - ಒಂದು ಬಾರಿ ಬಳಕೆ ಮಾಡಬಹುದಾದ ಪ್ಲಾಸ್ಟಿಕ್ ವಿರುದ್ಧ ಕ್ರಮ ತೆಗೆದುಕೊಳ್ಳುವ ಬದ್ಧತೆಯಲ್ಲಿ ಮುಂದು ವರೆದಿರುವ ಕೇಂದ್ರ ಸರ್ಕಾರ, ಉತ್ಪಾದಕರ ಮೇಲೆ ಪೂರ್ಣ ಹೊರೆ ಹೊರಿಸುವ ಮಾರ್ಗಸೂಚಿಗಳನ್ನು ಪ್ರಕಟಿಸಿದೆ.

ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದ ಹೊಸ ನಿಯಮಗಳಿಗೆ ಅಧಿಸೂಚನೆ ಪ್ರಕಟಿಸಿರುವ ಕೇಂದ್ರ ಸರ್ಕಾರ, ಪ್ಲಾಸ್ಟಿಕ್ ಪ್ಯಾಕೇಜ್ (3ನೇ ಪುಟಕ್ಕೆ)

## ಈರುಳ್ಳಿ ಬೆಲೆ ಏರಿಕೆ ತಡೆಯಲು ಹೆಚ್ಚುವರಿ ಆವಕ ಬಿಡುಗಡೆ

ನವದೆಹಲಿ, ಫೆ. 18 – ಈರುಳ್ಳಿ ಬೆಲೆ ತೀವ್ರ ಏರಿಕೆಯಾಗುವುದನ್ನು ತಡೆಯಲು ಮುಂದಾಗಿರುವ ಕೇಂದ್ರ ಸರ್ಕಾರ, ಯೋಜಿತವಾಗಿ ರಾಜ್ಯಗಳಿಗೆ ಈರುಳ್ಳಿ ಅವಕ ಬಿಡುಗಡೆ ಮಾಡಲು ಕ್ರಮ ತೆಗೆದುಕೊಂಡಿದೆ. ಮಹಾರಾಷ್ಟ್ರದ ಲಸಲ್‌ಗಾಂವ್ ಹಾಗೂ ಪಿಂಪಲ್‌ಗಾಂವ್ ಸಗಟು ಮಾರುಕಟ್ಟೆಯಲ್ಲಿ ಸಾಕಷ್ಟು ಈರುಳ್ಳಿ ದಾಸ್ತಾನು ಲಭ್ಯವಿದ್ದರೂ ಸಹ ಈ ಕ್ರಮ ತೆಗೆದುಕೊಳ್ಳಲಾಗಿದೆ. ಕಳೆದ ಕೆಲ ವಾರಗಳಲ್ಲಿ ಈರುಳ್ಳಿ ಬೆಲೆ ಸ್ಥಿರವಾಗಿ ಹೆಚ್ಚಾಗುತ್ತಿದೆ. ಕೆಲವು ನಗರಗಳಲ್ಲಿ ಈರುಳ್ಳಿ ಬೆಲೆ ಕೆಜಿಗೆ 43 ರೂ.ಗಳವರೆಗೂ ತಲುಪಿದೆ.

# ಕೃಷಿಯಲ್ಲಿ ಕೃತಕ ಬುದ್ಧಿಮತ್ತೆಗೆ ಒತ್ತು ನೀಡಿ: ಚಿಂತಾಲ್ ಕರೆ

ದಾವಣಗೆರೆ, ಫೆ.18- ಸಾಂಪ್ರದಾಯಿ ಕೃಷಿ ಪದ್ಧತಿ ಜೊತೆಗೆ ತಂತ್ರಜ್ಞಾನವನ್ನೂ ಅಳವಡಿಸಿಕೊಂಡಾಗ ಕೃಷಿಯಲ್ಲಿ ಹೆಚ್ಚಿನ ಲಾಭ ಗಳಿಸಲು ಸಾಧ್ಯವಿದೆ ಎಂದು ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ ಚಿಂತಾಲ್ ಹೇಳಿದರು.

ಯು.ಎಸ್. ಕಮ್ಯುನಿಕೇಷನ್ಸ್ ಸಹಯೋಗದಲ್ಲಿ ದೇಶಪಾಂಡೆ ಫೌಂಡೇಷನ್ ಹುಬ್ಬಳ್ಳಿ ಪ್ರಾಯೋಜಕತ್ವದಲ್ಲಿ ನಗರದ ಸರ್ಕಾರಿ ಬಾಲಕರ ಪ್ರೌಢಶಾಲಾ ಮೈದಾನದಲ್ಲಿ ಇಂದಿನಿಂದ ಮೂರು ದಿನಗಳ ಕಾಲ ಏರ್ಪಡಿಸಲಾಗಿರುವ ಕೃಷಿ ಮೇಳ ಉದ್ಘಾಟಿಸಿ ಅವರು ಮಾತನಾಡಿದರು.

ಆಧುನಿಕ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ ಉಪಯೋಗಿಸಿಕೊಂಡು ಕೃಷಿಯಲ್ಲಿ ಬೆಳೆಗೆ ಎಷ್ಟು ಪ್ರಮಾಣದ ನೀರು ಬೇಕೋ ಅಷ್ಟು ಮಾತ್ರ ಬಳಕೆ ಮಾಡಲು ಸಾಧ್ಯವಿದೆ. ಜೊತೆಗೆ ಔಷಧಿ ಅಥವಾ ರಸಗೊಬ್ಬರದ ಪ್ರಮಾಣವನ್ನು ಅಗತ್ಯಕ್ಕೆ ತಕ್ಕಷ್ಟು ಬಳಕೆ ಮಾಡಲ ಸಾಧ್ಯವಿದೆ ಎಂದು ಹೇಳಿದರು.

ಅತ್ಯುತ್ತಮ ಕೃಷಿ ತಾಂತ್ರಿಕತೆಗಳಲ್ಲಿ ಡ್ರೋಣ್ ಬಳಕೆಯೂ ಒಂದಾಗಿದೆ. ಮ್ಯಾಪಿಂಗ್ ಮಾಡಿಕೊಂಡ ಕೃಷಿ ಪ್ರದೇಶಕ್ಕೆ ಡ್ರೋಣ್ ಮೂಲಕ ಔಷಧಿ ಸಿಂಪರಣೆ ಮಾಡಬಹುದಾಗಿದೆ. ಈ ಪದ್ಧತಿ ಈಗಾಗಲೇ ಪ್ರಚಲಿತವಾಗಿದ್ದು, ಮುಂದಿನ ದಿನಗಳಲ್ಲಿ ಹೆಚ್ಚಾಗಲಿದೆ ಎಂದರು. (2ನೇ ಪುಟಕ್ಕೆ)

### ಮನುಷ್ಯನ ದಿನದ ನೀರಿನ ಬಳಕೆ 4750 ಲೀಟರ್ !

**ಮನುಷ್ಯನೊಬ್ಬ ದಿನವೊಂದಕ್ಕೆ 4750 ಲೀಟರ್ ಬಳಕೆ ಮಾಡುತ್ತಾನೆ. ಸಾಮಾನ್ಯವಾಗಿ ನಾವು ಕಣ್ಣಿಗೆ ಕಾಣುವ ನೀರಿನ ಬಳಕೆ ಪ್ರಮಾಣ ಮಾತ್ರ ಹೇಳುತ್ತೇವೆ. ಆದರೆ ನಾವು ಉಡುವ ಬಟ್ಟೆ, ಬಳಸುವ ಕಾಗದ, ಊಟ ಮಾಡುವ ಆಹಾರ ಸೇರಿದಂತೆ ಕಣ್ಣಿಗೆ ಕಾಣದ ನೀರಿನ ಮೌಲ್ಯವನ್ನೂ ಲೆಕ್ಕ ಹಾಕಿದರೆ ಬದುಕಿನ ವಿವಿಧ ಹಂತಗಳಲ್ಲಿ ನಾವು ಬಳಸುವ ನೀರಿನ ಪ್ರಮಾಣ ಕೋಟಿ ಲೀಟರ್‌ಗೂ ಹೆಚ್ಚಾಗುತ್ತದೆ ಎಂದು ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ ಚಿಂತಾಲ್ ಹೇಳಿದರು.**

### ರಾಜ್ಯಮಟ್ಟದ ಕೃಷಿ ಪ್ರಶಸ್ತಿಗೆ 19 ರೈತರು ನೋಂದಣಿ

**ಇದೇ ಮೊದಲ ಬಾರಿಗೆ ಜಿಲ್ಲೆಯಲ್ಲಿನ 19 ಜನ ರೈತರು ರಾಜ್ಯ ಮಟ್ಟದ ಕೃಷಿ ಪ್ರಶಸ್ತಿಗೆ ಹೆಸರು ನೋಂದಾಯಿಸಿದ್ದಾರೆ ಎಂದು ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ ಚಿಂತಾಲ್ ಹೇಳಿದರು. ಜಿಲ್ಲೆಯ ರೈತರೊಬ್ಬರು ಒಂದು ಹೆಕ್ಟೇರ್‌ಗೆ 107.61 ಕ್ವಿಂಟಾಲ್ ಭತ್ತ** (2ನೇ ಪುಟಕ್ಕೆ)

# ಹಿಜಾಬ್ ಇಸ್ಲಾಂನ ಅತ್ಯವಶ್ಯ ಧಾರ್ಮಿಕ ಪದ್ಧತಿಯಲ್ಲ

ಬೆಂಗಳೂರು, ಫೆ. 18- ಹಿಜಾಬ್ ಧರಿಸುವುದು ಇಸ್ಲಾಂನ ಅತ್ಯವಶ್ಯ ಧಾರ್ಮಿಕ ಅಭ್ಯಾಸವಲ್ಲ ಎಂದು ರಾಜ್ಯ ಸರ್ಕಾರ ಹೈಕೋರ್ಟ್ ಎದುರು ತಿಳಿಸಿದ್ದು, ಹಿಜಾಬ್‌ಗೆ ತಡೆ ಹಾಕಿರುವು ದರಿಂದ ಸಂವಿಧಾನದ ಧಾರ್ಮಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ 25ನೇ ವಿಧಿ ಉಲ್ಲಂಘನೆಯಾಗಿಲ್ಲ ಎಂದು ಹೇಳಿದೆ.

ನ್ಯಾಯಮೂರ್ತಿಗಳಾದ ರಿತು ರಾಜ್ ಅವಸ್ಥಿ, ಜೆ.ಎಂ. ಖಾಜಿ ಹಾಗೂ ಕೃಷ್ಣ ದೀಕ್ಷಿತ್ ಅವರನ್ನು ಒಳಗೊಂಡ ಪೀಠದ ಎದುರು ಹಾಜರಾಗಿದ್ದ ಸರ್ಕಾರದ ಅಡ್ವೊಕೇಟ್ ಜನರಲ್ ಪ್ರಭುಲಿಂಗ ನಾವಡಗಿ, ಶಬರಿಮಲೆ ಹಾಗೂ ಶಾಯರಾ ಬಾನು ಪ್ರಕರಣ ಗಳೂ ಸೇರಿದಂತೆ ಹಲವು ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟ್ ವ್ಯಾಖಾನಿಸಿರುವ ಸಂವಿಧಾನಿಕ ನೈತಿಕತೆಯ ಪರೀಕ್ಷೆ ಯಲ್ಲೂ ಹಿಜಾಬ್ ಸರಿಯಾಗಿರಬೇಕಾ ಗುತ್ತದೆ ಎಂದಿದ್ದಾರೆ.

ಹಿಜಾಬ್ ಇಲ್ಲವೇ ಕೇಸರಿ ಶಾಲು ಧರಿಸಿದ ವಿದ್ಯಾರ್ಥಿಗಳ ಮೇಲೆ ನಿರ್ಬಂಧ ಹೇರಿ ಫೆಬ್ರವರಿ 5ರಂದು ರಾಜ್ಯ ಸರ್ಕಾರ ಹೊರಡಿಸಿರುವ ಆದೇಶ ಸಂವಿಧಾನದ 25ನೇ ವಿಧಿಯ ಉಲ್ಲಂಘನೆ ಎಂಬ ವಾದವನ್ನೂ ನಾವಡಗಿ ತಳ್ಳಿ ಹಾಕಿದ್ದಾರೆ. ಸಂವಿಧಾನದ 25ನೇ ವಿಧಿಯ (2ನೇ ಪುಟಕ್ಕೆ)

**ಧಾರ್ಮಿಕ ಉಡುಗೆ ನಿಷೇಧಿಸುವ ಫೆ.5ರ ಆದೇಶದಿಂದ ಸಂವಿಧಾನದ ಉಲ್ಲಂಘನೆಯಾಗಿಲ್ಲ ಎಂದು ಹೈಕೋರ್ಟ್ ಎದುರು ರಾಜ್ಯ ಸರ್ಕಾರದ ವಾದ**

# ಮೈಲಾರ ಕಾರಣಿಕ 'ಮಳೆ-ಬೆಳೆ ಸಂಪಾದೀತಲೇ ಪರಾಕ್'

ಹೂವಿನಹಡಗಲಿ, ಫೆ.18- ಇಲ್ಲಿನ ಸುಪ್ರಸಿದ್ಧ ಶ್ರೀ ಮೈಲಾರಲಿಂಗೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವದ ಅಂಗವಾಗಿ ಶುಕ್ರವಾರ ಸಂಜೆ 'ಮಳೆ ಬೆಳೆ ಸಂಪಾದೀತಲೇ ಪರಾಕ್' ಎಂದು ಗೊರವಯ್ಯ ರಾಮಣ್ಣ ಕಾರಣಿಕ ನುಡಿದರು.

ಕೋವಿಡ್-19 ರ ಹಿನ್ನೆಲೆಯಲ್ಲಿ ಮೈಲಾರಕ್ಕೆ ಹೊರಗಿನಿಂದ ಆಗಮಿಸುವ ಭಕ್ತರಿಗೆ ವಿಜಯನಗರ ಜಿಲ್ಲಾಡಳಿತ ನಿರ್ಬಂಧ ಹೇರಿತ್ತಾದರೂ, ಅದನ್ನು ಲೆಕ್ಕಿಸದೆ ಗುರುವಾರದಂದೇ ಅಪಾರ ಪ್ರಮಾಣದಲ್ಲಿ ಭಕ್ತರು ಧಾವಿಸಿ ಬರುತ್ತಿರುವುದನ್ನು ಪರಿಗಣಿಸಿ, ಶುಕ್ರವಾರ ಬೆಳಿಗ್ಗೆಯಿಂದ ಭಕ್ತರಿಗೆ ವಿಧಿಸಿದ್ದ ನಿರ್ಬಂಧ ಸಡಿಲಿಸಿದ್ದರಿಂದ ಲಕ್ಷಾಂತರ ಭಕ್ತರು ನೆರೆದಿದ್ದರು.



ಈ ಸಂದರ್ಭದಲ್ಲಿ ಧರ್ಮಕರ್ತ ರಾದ ಶ್ರೀ ಗುರು ವೆಂಕಪ್ಪಯ್ಯ ಒಡೆಯರ್, ಕಾಗಿನೆಲೆ ಪೀಠಾಧಿಪತಿ ಶ್ರೀ ನಿರಂಜನಾನಂದಪುರಿ ಮಹಾಸ್ವಾಮಿಗಳು, ಶಾಸಕ ಪಿ.ಟಿ. ಪರಮೇಶ್ವರನಾಯ್ಕ್ ಸೇರಿದಂತೆ ಕಾಂಗ್ರೆಸ್, ಬಿಜೆಪಿ ಮುಖಂಡರು ಪಾಲ್ಗೊಂಡಿದ್ದರು.

ವಿಜಯನಗರ ಜಿಲ್ಲಾಧಿಕಾರಿ ಅನಿರುದ್ಧ್ ಶ್ರವಣ್, ಪೊಲೀಸ್ ವರಿಷ್ಠಾಧಿಕಾರಿ ಡಾ. ಚೇತನ್, ಸಹಾಯಕ ಆಯುಕ್ತ ಚಂದ್ರಶೇಖರಯ್ಯ, ಎಂ.ಎಚ್. ಪ್ರಕಾಶ್ ರಾವ್ ಮೊದಲಾದವರು (2ನೇ ಪುಟಕ್ಕೆ)

# ಹಕ್ಕುಗಳನ್ನು ಕಸಿದುಕೊಳ್ಳುವ ವಾತಾವರಣ ನಿರ್ಮಾಣ

## ಜೆ.ಎಂ.ಇಮಾಮ್ ರಾಜ್ಯಮಟ್ಟದ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕುಂ.ವೀರಭದ್ರಪ್ಪ ಕಳವಳ

ಜಗಳೂರು, ಫೆ.18- ಭಾರತ ದೇಶ 138 ಕೋಟಿ ಜನರ ದೇಶ, ಕೇವಲ ಒಂದೂವರೆ ಪರ್ಸೆಂಟ್ ಜನರ ಭಾರತವಲ್ಲ. ಸರ್ಕಾರ ಪ್ರಜಾಪ್ರಭುತ್ವದ ಹಕ್ಕುಗಳನ್ನು ಹಂತ ಹಂತವಾಗಿ ಕಸಿದುಕೊಂಡು ಫ್ಯಾಸಿಸ್ಟ್ ಹಿಟ್ಲರ್ ವಾತಾವರಣ ರೂಪುಗೊಳ್ಳುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಡಾ.ಕುಂ. ವೀರಭದ್ರಪ್ಪ ಆತಂಕ ವ್ಯಕ್ತಪಡಿಸಿದರು.

ಪಟ್ಟಣದ ಇಮಾಂ ಶಾಲೆ ಆವರಣದಲ್ಲಿ ಇಂದು ಜೆ.ಎಂ.ಇಮಾಂ ಟ್ರಸ್ಟ್( ರಿ) ವತಿಯಿಂದ ಹಮ್ಮಿಕೊಂಡಿದ್ದ ಮಹಮ್ಮದ್ ಇಮಾಂ ಸ್ಮಾರಕ ರಾಜ್ಯಮಟ್ಟದ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.



ವೈವಿಧ್ಯತೆಯಲ್ಲಿ ಏಕತೆ ಇರುವ ಎಲ್ಲಾ ಧರ್ಮಗಳ ದೇಶ ಭಾರತ. ಯಾವುದೇ ಒಬ್ಬರ ಜಹಗೀರು ಅಲ್ಲ. ದೇಶದ ಇತಿಹಾಸ ತಿಳಿಯದವರನ್ನು ರಾಜಕಾರಣಿಗಳನ್ನಾಗಿ ಆಯ್ಕೆ ಮಾಡಿದ್ದೇವೆ .ರಾಷ್ಟ್ರ ಧ್ವಜ, ಸಂವಿಧಾನಗಳ ಬಗ್ಗೆ ಅಸಹ್ಯಕರ ಹೇಳಿಕೆಗಳ ಬಗ್ಗೆ ಕಮಲ ಹಾಸನ್ ರಂತಹ ಸಿನಿಮಾ ನಟರು ಪ್ರತಿಭಟಿಸುತ್ತಿದ್ದಾರೆ. ಆದರೆ ಕರ್ನಾಟಕದಲ್ಲಿ ಸಿನಿ ತಾರೆಯರ ಮೌನ ಖೇದಕರ ಸಂಗತಿ ಎಂದರು.

ದೆಹಲಿಯ ಇಂಡಿಯಾ ಗೇಟ್ ಮೇಲೆ ಸ್ವಾತಂತ್ರ್ಯ ಹೋರಾಟದಲ್ಲಿ ಮಡಿದವರ ಹೆಸರುಗಳಿವೆ. ಇದರಲ್ಲಿ ಶೇ.68 ರಷ್ಟು ಮುಸ್ಲಿಮರ ಹೆಸರುಗಳಿವೆ. ರಾಜಕಾರಣಿಗಳು ದೇಶದ ಇತಿಹಾಸ ತಿಳಿದುಕೊಳ್ಳಬೇಕು ಎಂದರು.

ಸ್ವಾತಂತ್ರ್ಯಪೂರ್ವದಲ್ಲಿ ಜಗಳೂರು ನಾಡಿಗೆ ಕೆರೆಗಳನ್ನು ನಿರ್ಮಿಸಿ, ಶಿಕ್ಷಣ ಸಂಸ್ಥೆ ಸ್ಥಾಪಿಸಿ, ಅಪಾರ ಅಭಿವೃದ್ಧಿ ಕನಸು ಹೊತ್ತು ಮಹಾರಾಜರನ್ನು ಕರೆಸಿಕೊಂಡಿದ್ದ ಇಮಾಂ ಸಾಹೇಬರಂತಹ ಮುತ್ಸದ್ದಿ (3ನೇ ಪುಟಕ್ಕೆ)

# ಹರಿಹರ: ಊರಮ್ಮನ ಹಬ್ಬಕ್ಕೆ ಚಾಲನೆ



ಹರಿಹರ, ಫೆ.18- ನಗರದಲ್ಲಿ ಮಾರ್ಚ್ 22 ರಿಂದ 26 ರವರೆಗೆ ನಡೆಯುವ ಗ್ರಾಮದೇವತೆ ಊರಮ್ಮ ದೇವಿಯ ಹಬ್ಬದ ಅಂಗವಾಗಿ ಇಂದು ದೇವಸ್ಥಾನ ರಸ್ತೆಯಲ್ಲಿ ಹಂದರ ಗಂಭ ಪೂಜೆ ಮಾಡಿ ಹಬ್ಬದ ಚಾಲನೆ ನೀಡಲಾಯಿತು.

ಈ ಸಂದರ್ಭದಲ್ಲಿ ಕಸಬಾ ಗೌಡ್ರು ಲಿಂಗರಾಜ್ ಪಾಟೀಲ್, ಮಾಜೇನಹಳ್ಳಿ ಗೌಡ್ರು, ಚನ್ನಬಸಪ್ಪ, ಉತ್ಸವ ಸಮಿತಿಯ ಅಧ್ಯಕ್ಷ ಕೆ.ಅಣ್ಣಪ್ಪ, ಕಾರ್ಯದರ್ಶಿ ಬೆಣ್ಣೆ ರೇವಣಸಿದ್ದಪ್ಪ, ಖಜಾಂಚಿ ಶೇರಾಪುರ ರಾಜಪ್ಪ, ಸಹ ಕಾರ್ಯದರ್ಶಿ ಪಾಲಾಕ್ಷಪ್ಪ, ನಗರಸಭೆ ಎಇಇ ಬಿರಾದಾರ, ಬಣಕಾರ ಸಿದ್ದಪ್ಪ, ನಗರಸಭೆ ಅಧ್ಯಕ್ಷೆ ರತ್ನ ಡಿ. ಉಜ್ಜೇಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ಕುರುಬ ಸಮಾಜದ ಅಧ್ಯಕ್ಷ ಕೆ.ಜಡಿಯಪ್ಪ, ನಗರಸಭೆ ಸದಸ್ಯರಾದ ಜಂಬಣ್ಣ ಗುತ್ತೂರು, ಪಕ್ಕೀರಮ್ಮ, ಎಸ್.ಎಂ. ವಸಂತ್, ಉಷಾ ಮಂಜುನಾಥ್, ಕೆ.ಜಿ. ಸಿದ್ದೇಶ್, ರಜನಿಕಾಂತ್, ಮುಖಂಡರಾದ ನಂದಿಗಾವಿ ಶ್ರೀನಿವಾಸ್, ಗೌಡ್ರು ಪುಟ್ಟಪ್ಪ, ಜಿ. ನಂಜಪ್ಪ, ಹೆಚ್.ಕೆ. ಕೊಟ್ರಪ್ಪ, ಕೆ.ಬಿ. ರಾಜಶೇಖರ್, ಕರಿಬಸಪ್ಪ ಕಂಚಿಕೇರಿ, ಶಿವಪ್ರಕಾಶ್ ಶಾಸ್ತ್ರಿ, ರೇವಣಪ್ಪ ದ್ಯಾನೇಕರ್, ಸುರೇಶ್ ಚಂದಪೂರ್, ಚೂರಿ ಜಗದೀಶ್, ಪತ್ರಕರ್ತ ಎಂ. ಚಿದಾನಂದ ಕಂಚಿಕೇರಿ, ಗಿರೀಶ್ ಗೌಡ್ರು, ಬೆಣ್ಣೆ ಸಿದ್ದೇಶ್, ಜಿ.ಕೆ. ಮಲ್ಲಿಕಾರ್ಜುನ, ನಾಗರಾಜ್ (2ನೇ ಪುಟಕ್ಕೆ)


|| ಶ್ರೀ ಸೂರ್ಯನಾರಾಯಣ ಪ್ರಸನ್ನ|| || ಶ್ರೀ ರಂಗನಾಥಸ್ವಾಮಿ ಪ್ರಸನ್ನ ||

## ಕೈಲಾಸ ಸಮಾರಾಧನೆ ಆಹ್ವಾನ



ಶ್ರೀಮತಿ ಗಿರಿಜಮ್ಮ & ಶ್ರೀ ಎ. ಮುರುಗೇಂದ್ರಪ್ಪ
ದೊಡ್ಡಮನೆ ಮತ್ತು ಮಕ್ಕಳು
ಕುರ್ಕಿ, ದಾವಣಗೆರೆ ತಾಲ್ಲೂಕು ಜಿಲ್ಲೆ.
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 05.02.2022ನೇ ಶನಿವಾರ ಮಧ್ಯಾಹ್ನ 12.15 ಗಂಟೆಗೆ ನಮ್ಮ ತೃತೀಯ ಪುತ್ರನಾದ
ಶ್ರೀ ಎ.ಎಂ. ಮಹೇಶ್ವರಪ್ಪನವರು
(ಮಾಜಿ ಗ್ರಾಮ ಪಂಚಾಯ್ತಿ ಸದಸ್ಯರು)
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಶಿವಗಣಾರಾಧನೆ'ಯನ್ನು
ದಿನಾಂಕ : 20.02. 2022ನೇ ಭಾನುವಾರ ಬೆಳಿಗ್ಗೆ 10.30 ಘಂಟೆಗೆ ಕುರ್ಕಿ ಗ್ರಾಮದ ನಮ್ಮ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ, ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ದುಃಖತಪ್ತರು : ಮೃತರ ಧರ್ಮಪತ್ನಿ : ಶ್ರೀಮತಿ ಜಿ.ಎಸ್. ಸುಧಾ ದೊಡ್ಡಮನೆ ಮತ್ತು ಮಕ್ಕಳು, ಶ್ರೀಮತಿ ಗಿರಿಜಮ್ಮ ತಾಲ್ಲೂಕು ಪಂಚಾಯ್ತಿ ಸದಸ್ಯರು ಶ್ರೀ ಎ. ಮುರುಗೇಂದ್ರಪ್ಪ, ಗ್ರಾ.ಪಂ. ಮಾಜಿ ಅಧ್ಯಕ್ಷರು, ದೊಡ್ಡಮನೆ ಮತ್ತು ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಸೊಸೆಯಂದಿರು, ದೊಡ್ಡಮನೆ ವಂಶಸ್ಥರು, ಅಜ್ಜಪ್ಪರ ವಂಶಸ್ಥರು, ಕುರ್ಕಿ ಗ್ರಾಮಸ್ಥರು ಹಾಗೂ ಅಪಾರ ಬಂಧುಗಳು-ಮಿತ್ರರು.
ಫೋ. : 8861444114, 9108571837, 76766 88387
ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



## ಪುಣ್ಯಸ್ಮರಣೆ



ಶ್ರೀಯುತ ಎ. ಗಂಗಾಧರಪ್ಪ

ನೀವು ನಮ್ಮನ್ನಗಲಿ ಇಂದಿಗೆ ಎಂಟು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲೇ ಮುನ್ನಡೆಯುತ್ತಿರುವ ಹಾಗೂ ನಿಮ್ಮ ಆತ್ಮಕ್ಕೆ ಶಾಂತಿ ಕೋರುವ...

ಮಕ್ಕಳು, ಅಪಾರ ಬಂಧು-ಬಳಗ ಹಾಗೂ ಅಣಪೂರ್ ವಂಶಸ್ಥರು
- ಈಶ್ವರ್ ರೇಡಿಯೋ ಅಂಡ್ ಟಿ.ವಿ., ಅಶೋಕ ರೋಡ್, ದಾವಣಗೆರೆ.
- ಈಶ್ವರ್ ಡಿಜಿಟ್ರಾನಿಕ್ಸ್, ಹದಡಿ ರಸ್ತೆ, ದಾವಣಗೆರೆ
- ಈಶ್ವರ್ ಡಿಜಿಟ್ರಾನಿಕ್ಸ್, ಹಾವೇರಿ.
- ಈಶ್ವರ್ ಡಿಜಿಟ್ರಾನಿಕ್ಸ್, ಹುಬ್ಬಳ್ಳಿ.
- ಈಶ್ವರ್ ಡಿಜಿಟ್ರಾನಿಕ್ಸ್, ಚನ್ನಗಿರಿ.
- ಈಶ್ವರ್ ಡಿಜಿಟ್ರಾನಿಕ್ಸ್, ರಾಣೇಬೆನ್ನೂರು.
- ರಾಜ್ ಏಜೆನ್ಸೀಸ್, ದಾವಣಗೆರೆ.
- ರಾಜ್ ಏಜೆನ್ಸೀಸ್, ಬೆಳಗಾವಿ. ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರು.

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ವಾರ್ಡ್ ಬಾಯ್ (ಹುಡುಗ/ಹುಡುಗಿ) (10th, PUC ಪಾಸ್, ಫೇಲ್) Full time / Part time ಬೇಕಾಗಿದ್ದಾರೆ. ಸಂಪರ್ಕಿಸಿ
94488 86026, 98865 67791

**ಕುಕ್ಕುವಾಡದಲ್ಲಿ ಸೈಟ್ ಮಾರಾಟಕ್ಕಿದೆ**
ದಾವಣಗೆರೆ ತಾಲ್ಲೂಕು ಕುಕ್ಕುವಾಡ ಗ್ರಾಮದ ಬಸ್ ನಿಲ್ದಾಣದ ಬಳಿ 50x100 ಅಳತೆಯ ಖಾಲಿ ನಿವೇಶನ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ :
ಮೊ. 79756-43955

**ಸೈಟ್‌ಗಳು ಮಾರಾಟಕ್ಕಿವೆ**
J.H. PATEL ಬಡಾವಣೆ ಡಬಲ್ ರೋಡ್ ಪಕ್ಕದ ರಸ್ತೆ, ಉತ್ತರ 50x80, J.H. PATEL ಬಡಾವಣೆ extended ಪಶ್ಚಿಮ 30x40, ಶಿವ-ಪಾರ್ವತಿ ಬಡಾವಣೆ, Euro kids school ಹತ್ತಿರ 30X57
ಐಗೂರು ವಿಜಯಕುಮಾರ್
99457 02495

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಗ್ರಾಮಾಂತರ ಪ್ರದೇಶದ ಪುರುಷ ಅಭ್ಯರ್ಥಿಗಳಿಗೆ ಊಟ, ವಸತಿ ಸೌಲಭ್ಯವಿದೆ.
ಸಂಪರ್ಕಿಸಿ : 98442-94446

**ಮನೆ ಬಾಡಿಗೆಗೆ / ಲೀಸ್‌ಗೆ ಇವೆ**
ಸಿಂಗಲ್ ಬೆಡ್‌ರೂಂ, ಡಬಲ್ ಬೆಡ್‌ರೂಂ ಮನೆಗಳು ವಿದ್ಯಾನಗರ, ಶಿವಕುಮಾರ ಸ್ವಾಮಿ ಬಡಾವಣೆ, ಸರಸ್ವತಿ ನಗರ ಜಯನಗರದಲ್ಲಿ ಮನೆ ಬಾಡಿಗೆಗೆ / ಲೀಸ್‌ಗೆ ಇವೆ.
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715
½ ಅರ್ಧ ಪರ್ಸೆಂಟ್ ಕಮೀಷನ್ ಆಧಾರದ ಮೇಲೆ

**ಬೇಕಾಗಿದ್ದಾರೆ**
ಸಸ್ಯಹಾರಿ ಹೋಟೆಲ್‌ಗೆ ಕ್ಲೀನರ್ ಕೆಲಸಕ್ಕೆ ಪುರುಷ-ಮಹಿಳೆಯರು ಬೇಕಾಗಿದ್ದಾರೆ. ಶಾಮನೂರು ರಸ್ತೆ, ದಾವಣಗೆರೆ.
ಮೊ. 97434-82356

**ಮನೆ ಬಾಡಿಗೆಗೆ ಇದೆ**
2BHK ಮೊದಲನೆ ಮಹಡಿ, ಬೋರ್‌ವೆಲ್ & ಕಾರ್ಪೊರೇಷನ್ ನೀರಿನ ವ್ಯವಸ್ಥೆಯಿರುವ ಮನೆ ದೇವರಾಜ ಅರಸ್ ಬಡಾವಣೆ 'ಬಿ' ಬ್ಲಾಕ್ 1ನೇ ಮುಖ್ಯರಸ್ತೆ, 11ನೇ ಕ್ರಾಸ್ ನಂ 353 'ಸಿರಿಸಾರ' ಉತ್ತರ ದಿಕ್ಕಿಗೆ ಬಾಗಿಲಿರುವ ಮನೆ ಬಾಡಿಗೆಗೆ ದೊರೆಯುತ್ತದೆ. ವಿಚಾರಿಸಿ
94489 63300

**ಹೊಸಮನೆ ಮಾರಾಟಕ್ಕಿದೆ**
ದಾವಣಗೆರೆ ಎಸ್.ಎಸ್. ಲೇಔಟ್ 'ಬಿ' ಬ್ಲಾಕ್ 3ನೇ ಮೇನ್ ನಲ್ಲಿ 20x65 ಅಳತೆಯ ನೆಲಮಹಡಿ, ಮೊದಲ ಹಾಗೂ 2 ನೇ ಮಹಡಿಗಳಿರುವ ಪಶ್ಚಿಮ ದಿಕ್ಕಿನ ಹೊಸಮನೆ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ
88929 69279

**ರೂಮ್ಸ್ ಬಾಡಿಗೆಗೆ ಇವೆ**
ದಾವಣಗೆರೆ ನಗರದ ಎಂಸಿಸಿ 'ಬಿ' ಬ್ಲಾಕ್‌ನಲ್ಲಿ ಪ್ರತ್ಯೇಕ ಅಟ್ಯಾಚ್ ಬಾತ್ ರೂಂವುಳ್ಳ ಮೂರು ರೂಂಗಳು ಬಾಡಿಗೆಗೆ ಇವೆ. (Only For Ladies) ಸಂಪರ್ಕಿಸಿ
97427 67274, 93538 97342

**ಮನೆ ಬಾಡಿಗೆಗೆ ಇದೆ**
ಪಿಸಾಳೆ ಕಾಂಪೌಂಡ್, 3 ನೇ ಕ್ರಾಸ್ ಪಿ.ಬಿ.ರಸ್ತೆ, ಮನೆ ನಂ- 809/7 ಸಿ ಎರಡನೇ ಮಹಡಿ, ಸಿಂಗಲ್ ಬೆಡ್ ರೂಂ, ಬೋರ್‌ವೆಲ್ ಹಾಗೂ ಕಾರ್ಪೊರೇಷನ್ ನೀರಿನ ಸೌಲಭ್ಯವಿದೆ.
ಫೋನ್ ನಂ.9164355827

**ಸೈಟ್ ಮಾರಾಟಕ್ಕಿದೆ**
ಸಿದ್ಧಲಿಂಗೇಶ್ವರ ಬಡಾವಣೆ, ಸಿದ್ಧಗಂಗಾ ಶಾಲೆಯ ಮೇನ್ ಗೇಟ್ ಹತ್ತಿರ 20x60 ಅಡಿ ಅಳತೆಯ ಪಶ್ಚಿಮ ದಿಕ್ಕಿನ ಸೈಟ್ ಮಾರಾಟಕ್ಕಿದೆ. ಆಸಕ್ತರು ವಿಚಾರಿಸಿ.
98443 23294

**ಸೈಟ್‌ಗಳು ಮಾರಾಟಕ್ಕಿವೆ**
ಆಂಜನೇಯ ಬಡಾವಣೆಯಲ್ಲಿ 40x60 ದಕ್ಷಿಣ, ವಿನಾಯಕ ಬಡಾವಣೆಯಲ್ಲಿ 30x40 ಉತ್ತರ, ಭೂಮಿಕ ನಗರದಲ್ಲಿ 30x50 ಉತ್ತರ, ಬನಶಂಕರಿ ಬಡಾವಣೆ 30x50 ಪಶ್ಚಿಮ.
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**2BHK ಮನೆ ಬಾಡಿಗೆಗಿದೆ**
ಪೂರ್ವ ದಿಕ್ಕಿಗೆ ಬಾಗಿಲುಳ್ಳ ಸುಸಜ್ಜಿತ 2BHK, 1ನೇ ಮಹಡಿ ಮನೆ ತಿಮ್ಮಾರೆಡ್ಡಿ, ವಿಜ್ಞಾನ್, ನೂತನ್ ಹಾಗೂ ಬಿಐಇಟಿ ಕಾಲೇಜು ಹತ್ತಿರವಿದ್ದು, ಆಂಜನೇಯ ಬಡಾವಣೆ, 18ನೇ ಕ್ರಾಸ್ ಇಲ್ಲಿ ಬಾಡಿಗೆಗಿದೆ. ಸಸ್ಯಹಾರಿಗಳು ಮಾತ್ರ
98452 16749, 95352 82899

**ಜೀವನ ಪರ್ಯಂತ ಪೆನ್ಷನ್**
LIC, IPO, ಖರೀದಿ ಮಾಹಿತಿ ಮ್ಯುಚ್ಯುವಲ್ ಫಂಡ್ ಪಾಲಿಸಿ, ಮಕ್ಕಳ ಮದುವೆ, ವಿದ್ಯಾಭ್ಯಾಸ, ಗೃಹ ನಿರ್ಮಾಣ, ಹಳೆಯ ಪಾಲಿಸಿಗಳ ಹಾಗು ವಾಹನಗಳ ವಿಮೆಯ ಮಾಹಿತಿಗಾಗಿ
86602 35013

**ಹೊಸ ಮನೆ ಮಾರಾಟಕ್ಕಿದೆ**
ತಿಂಗಳಿಗೆ ರೂಪಾಯಿ 35000/- ಬಾಡಿಗೆ ಬರುವ ಹೊಸಮನೆ ಮಾರಾಟಕ್ಕಿದೆ. ಬೇಕಾದವರು ಸಂಪರ್ಕಿಸಿ.
98452 63056

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,450/-Sqft)
ಹುಲ್ಲುಮನೆ ಪ್ರಾಪರ್ಟೀಸ್ & ಪವರ್ ಲಿಮಿಟೆಡ್
95135 03000
97392 15000

**ಮನೆ ಬಾಡಿಗೆಗಿವೆ**
ಶಾಮನೂರು ಪಕ್ಕ ಡಾಲರ್ಸ್ ಕಾಲೋನಿಯಲ್ಲಿ ಶಿವ ಸದನ ತಿಮ್ಮಾರೆಡ್ಡಿ ಹೈಸ್ಕೂಲ್ ಹತ್ತಿರ 1BHK, 2BHK ಮನೆ ಬಾಡಿಗೆಗೆ ಇವೆ. ಲಿಫ್ಟ್ ವ್ಯವಸ್ಥೆ ಇದೆ. ಸಂಪರ್ಕಿಸಿ
87623 12789
99722 44667


**ತಕ್ಷಣ ಬೇಕಾಗಿದ್ದಾರೆ**
ಕೋರಿಯರ್ ಆಫೀಸ್ ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಜ್ಞಾನವುಳ್ಳ, ಇಂಗ್ಲಿಷ್ ಓದಲು, ಬರೆಯಲು ಬರುವಂತಹ ಹುಡುಗಿಯರು ಹಾಗೂ ಕೋರಿಯರ್ ಪಾರ್ಸಲ್ ಡೆಲಿವರಿ ಮಾಡಲು ಹುಡುಗರು ಬೇಕಾಗಿದ್ದಾರೆ. ದ್ವಿಚಕ್ರ ವಾಹನ (Two Wheeler Bike) ಇರಬೇಕು. ಪೆಟ್ರೋಲ್ ಭತ್ಯೆ ಕೊಡಲಾಗುವುದು ಸಂಪರ್ಕಿಸಿ
94807 95548, 98800 42597
Whatsaap No. 70199 83025


**ಮಿಯಾಖಾನ್ ಬೆಂಗಾಳಿ**
ಎಲ್ಲ ಸಮಸ್ಯೆಗಳಿಗೆ ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್, ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮ ವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ.
ಕುಡುಕರ ಅರಿವಿಲ್ಲದೆ ಕುಡಿತ ಬಿಡಿಸಲಾಗುವುದು.
ದಾವಣಗೆರೆ.
ಮೊ : 8133933804

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ ಮತ್ತು ದಾವಣಗೆರೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಹಾಗೂ ಜಗಳೂರಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕೆಲಸ ಮಾಡಲು ಗನ್ ಮ್ಯಾನ್‌ಗಳು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಮತ್ತು ESI, PF ಸೌಲಭ್ಯವಿರುತ್ತದೆ. ಸೆಕ್ಯೂರಿಟಿ ಗಾರ್ಡ್‌ಗಳಿಗೆ Per day 400 ರೂ. ಸಂಬಳವಿರುತ್ತದೆ. ಸಂಪರ್ಕಿಸಿ
63667 28552, 96060 50591, 86603 98210

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಎಂಟನೇ ವರ್ಷದ ಪುಣ್ಯಸ್ಮರಣೆ**



ಲಿಂ|| ಸಿ.ಎಸ್. ಸಿದ್ಧಬಸಯ್ಯನವರು, ಮುಡೇನಹಳ್ಳಿ
ಲಿಂಗೈಕ್ಯ : 19.02.2014

ನೀವು ನಮ್ಮನ್ನಗಲಿ ಇಂದಿಗೆ ಎಂಟು ವರ್ಷಗಳಾದವು
ನಿಮ್ಮ ನೆನಪು ನಮ್ಮಲ್ಲಿ ಸದಾ ಹಚ್ಚಹಸಿರಾಗಿದೆ. ಸದಾ ನಿಮ್ಮ ನೆನಪಿನಲ್ಲಿರುವ,
ಧರ್ಮಪತ್ನಿ : ಶ್ರೀಮತಿ ಶಾರದಮ್ಮ ಸಿ.ಎಸ್. ಸಿದ್ಧಬಸಯ್ಯ
ಶ್ರೀಮತಿ, ಶ್ರೀ ಸಿ.ಎಸ್. ಮರುಳಸಿದ್ಧಯ್ಯ ಮತ್ತು ಸಹೋದರರು, ಅಗಸನಕಟ್ಟೆ
ಶ್ರೀಮತಿ ಲತಾ, ಶ್ರೀ ಸಿ.ಎಸ್. ನಾಗರಾಜಯ್ಯ,
ಶ್ರೀಮತಿ ಗೀತಾ, ಶ್ರೀ ಸಿ.ಎಸ್. ವಸಂತಯ್ಯ
ಶ್ರೀಮತಿ ಮಮತ, ಶ್ರೀ ಸಿ.ಎಸ್. ಸಿದ್ದೇಶ್
ಮೊಮ್ಮಕ್ಕಳಾದ : ಯಶವಂತ್, ಯೋಗೇಶ್, ಆಕಾಶ್, ನಿವೇದಿತಾ, ನೂತನ್, ಕಾರ್ತಿಕ್ ಹಾಗೂ ಬಂಧು-ಮಿತ್ರರು, ಮುಡೇನಹಳ್ಳಿ.
ಮುಡೇನಹಳ್ಳಿ ಮತ್ತು ಅಗಸನಕಟ್ಟೆ ಗ್ರಾಮಸ್ಥರು

**ಶ್ರೀ ವಿಶ್ವಬಂಧು ಪ್ರಾವಿಜನ್ ಸ್ಟೋರ್**
ಕೆ.ಆರ್.ಮಾರ್ಕೆಟ್, ದಾವಣಗೆರೆ. ಮೊ : 99807-28126


## ಕೊಕ್ಕನೂರಿನಲ್ಲಿ ಇಂದು ಜಿಲ್ಲಾಡಳಿತದಿಂದ ಗ್ರಾಮ ವಾಸ್ತವ್ಯ



ಮಲೇಬೆನ್ನೂರು, ಫೆ.18- ಕೊಕ್ಕನೂರು ಗ್ರಾಮದಲ್ಲಿ ಫೆ.19ರ ಶನಿವಾರ ಜಿಲ್ಲಾಡಳಿತ ಹಮ್ಮಿಕೊಂಡಿರುವ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ' ಎಂಬ ವಿನೂತನ ಕಾರ್ಯಕ್ರಮದ ಅಂತಿಮ ಹಂತದ ಸಿದ್ಧತೆಗಳನ್ನು ಶುಕ್ರವಾರ ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್, ತಹಶೀಲ್ದಾರ್ ಕೆ.ಬಿ.ರಾಮಚಂದ್ರಪ್ಪ, ಉಪತಹಶೀಲ್ದಾರ್ ಆರ್.ರವಿ ಪರಿಶೀಲಿಸಿದರು.

ಗ್ರಾಮದ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಕಾರ್ಯಕ್ರಮಕ್ಕೆ ವೇದಿಕೆ ಸಿದ್ದ ಪಡಿಸಲಾಗಿದ್ದು, ಕೊಕ್ಕನೂರು ಗ್ರಾ.ಪಂ. ವ್ಯಾಪ್ತಿಯ ಜನರು ತಮ್ಮ ಕುಂದು - ಕೊರತೆ ಕುರಿತು ಜಿಲ್ಲಾಧಿಕಾರಿಗಳಿಗೆ ಪತ್ರದ ಮೂಲಕ ಮನವಿ ಮಾಡಲು ಅವಕಾಶ ನೀಡಲಾಗಿದೆ.

ಶನಿವಾರ ಬೆಳಿಗ್ಗೆ 10 ಗಂಟೆಗೆ ಆಗಮಿಸುವ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ನೇತೃತ್ವದ ಎಲ್ಲಾ ಅಧಿಕಾರಿಗಳನ್ನು ಪೂರ್ಣ ಕುಂಭ ಮೇಳದೊಂದಿಗೆ ಸ್ವಾಗತಿಸಲು ಗ್ರಾಮಸ್ಥರು ನಿರ್ಧರಿಸಿದ್ದಾರೆ.

11 ಗಂಟೆಗೆ ಶಾಸಕ ಎಸ್.ರಾಮಪ್ಪ ಅವರ ಅಧ್ಯಕ್ಷತೆಯಲ್ಲಿ ಮತ್ತು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರ ನೇತೃತ್ವದಲ್ಲಿ ವೇದಿಕೆ ಕಾರ್ಯಕ್ರಮ ಜರುಗಲಿದೆ.

## 'ಮಳೆ-ಬೆಳೆ ಸಂಪಾದೀತಲೇ ಪರಾಕ್'

(1ನೇ ಪುಟದಿಂದ) ಭಾಗಿಯಾಗಿದ್ದರು.

**ಕಾರಣಿಕದ ವಿಶ್ಲೇಷಣೆ :** 'ಮಳೆ ಬೆಳೆ ಸಂಪಾದೀತಲೇ ಪರಾಕ್' 2022 ರಲ್ಲಿ ನುಡಿದ ಕಾರಣಿಕ ವಾಣಿ ಪುನರಾವರ್ತನೆಯಾಗಿದೆ. ಹಾಗಾಗಿ ಎಲ್ಲರಿಗೂ ಅರ್ಥವಾಗಿದೆ. ಆದರೆ ಸರಿಯಾದ ಮಳೆಯಾಗಿ ಅತಿವೃಷ್ಟಿ ಯಾಗಬಾರದು. ಸರಿಯಾದ ಬೆಳೆ ಬೆಳೆದರೂ ಅದಕ್ಕೆ ತಕ್ಕ ನ್ಯಾಯ ಸಮ್ಮತ ಬೆಲೆ ಸಿಕ್ಕಾಗ ಮಾತ್ರ ಕಾರಣಿಕಕ್ಕೆ ಅರ್ಥ ಬರುತ್ತದೆ ಎಂದು ನೆರೆದ ಭಕ್ತರು ಚರ್ಚಿಸುತ್ತಿದ್ದುದು ಕೇಳಿ ಬಂತು. ಜಿಲ್ಲಾಡಳಿತದ ನಿರ್ಬಂಧದ ನಡುವೆ ಕಾರಣಿಕೋತ್ಸವ ನಡೆದ ಡೆಂಕನಮರಡಿಯಲ್ಲಿ ಲಕ್ಷಾಂತರ ಜನ ಭಾಗಿಯಾಗಿದ್ದು ವಿಶೇಷವಾಗಿತ್ತು.

ಜಿಲ್ಲೆ, ಹೊರ ಜಿಲ್ಲೆಗಳಿಂದ ಪಾದಯಾತ್ರೆಗಳ ಸಂಖ್ಯೆಯೂ ಹೆಚ್ಚಾಗಿತ್ತು. ಅಂಗಡಿ ಮುಂಗಟ್ಟುಗಳಿಗೆ ನಿರ್ಬಂಧ ವಿಧಿಸಿದ್ದರಿಂದ ಯಾವುದೇ ರೀತಿಯ ವ್ಯಾಪಾರ ವಹಿವಾಟು ಕಂಡು ಬರಲಿಲ್ಲ. .ಶುಕ್ರವಾರದಂದು ನಿರ್ಬಂಧವನ್ನು ಸಡಿಲಿಸುವ ಬದಲು ನಾಲ್ಕಾರು ದಿನಗಳ ಮೊದಲೇ ನಿರ್ಬಂಧ ಸಡಿಲಿಸಿದರೆ ಅನುಕೂಲವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

## ಹರಿಹರ: ಊರಮ್ಮನ ಹಬ್ಬಕ್ಕೆ ಚಾಲನೆ

(1ನೇ ಪುಟದಿಂದ) ವಕೀಲರು, ತುಳಜಪ್ಪ ಭೂತೆ, ಅಜಿತ್ ಸಾವಂತ್, ಐರಣಿ ನಾಗರಾಜ್, ಅಡಿಕೆ ಕುಮಾರ್, ಹಂಚಿನ ನಾಗರಾಜಪ್ಪ. ಬ್ಯಾಂಕ್ ನಾಗರಾಜ್, ಬೆಳಕೇರಿ ನಾಗರಾಜ್, ಮನು ಮುದೇಗೌಡ್ರು, ಅಶೋಕ, ವೇದಮೂರ್ತಿ, ಮಹೇಶ್, ಪರಶುರಾಮ್ ಕಾಟ್ವೆ, ಅಜ್ಜಪ್ಪ, ಹನುಮಂತಪ್ಪ ರಡ್ಡಿ, ಮಡಿವಾಳ ರವಿ, ಪಾಟೀಲ್ ಬಸವರಾಜ್, ಕಾಂತರಾಜ್, ಚಂದ್ರಪ್ಪ ಮಜ್ಜಿಗೆ, ನಾರಾಯಣ, ಹಾವನೂರು ವೀರಣ್ಣ, ಪತ್ರಕರ್ತರಾದ ಕೃಷ್ಣ ರಾಜೋಳ್ಳಿ, ಟಿ. ಇನಾಯತ್, ಇರ್ಫಾನ್, ಜಿ.ಕೆ. ಪಂಚಾಕ್ಷರಿ, ಆರ್. ಮಂಜುನಾಥ್, ಕೆ. ಜೈಮುನಿ, ಹೆಚ್.ಸಿ. ಕೀರ್ತಿ ಕುಮಾರ್, ಹೆಚ್. ಸುಧಾಕರ್, ಅರ್ಚಕರಾದ ಮಾನಾಚಾರ್, ವೀರೇಶ್ ಆಚಾರ್, ಜನಾರ್ದನ ಆಚಾರ್, ನಾಗರಾಜ್ ಆಚಾರ್ ಉಪಸ್ಥಿತರಿದ್ದರು.


**ಮರು ಮದುವೆ**
ಲಿಂಗಾಯತ ಅಥವಾ ಜಾತಿಯ ಅಭ್ಯಂತರವಿಲ್ಲದ, ಮರುಮದುವೆ ಬಯಸುವ ವಿಧವೆ, ವಿಧುರ, ವಿಚ್ಛೇದಿತರ ಹೊಸ ಜೀವನಕ್ಕಾಗಿ ಹಾಗೂ ಅವರವರ ವಯಸ್ಸಿಗನುಸಾರವಾಗಿ ಹೊಂದಾಣಿಕೆ ಮಾಡಿ ಕೊಡಲಾಗುವುದು. ಸಂಪರ್ಕಿಸಿ
98807 29108

**ತಕ್ಷಣ ಬೇಕಾಗಿದ್ದಾರೆ**
SS ಆಸ್ಪತ್ರೆ, ಬಾಪೂಜಿ ಆಸ್ಪತ್ರೆ ಹಾಗೂ ದಾವಣಗೆರೆ ಸುತ್ತಮುತ್ತಲು 8 ಗಂಟೆ ಹಾಗೂ 12 ಗಂಟೆ ಕೆಲಸ ಮಾಡಲು ಲೇಡಿಸ್/ಜೆಂಟ್ಸ್ ಸೆಕ್ಯೂರಿಟಿ ಗಾರ್ಡ್ಸ್ ತಕ್ಷಣ ಬೇಕಾಗಿದ್ದಾರೆ. ESI-PF ಸೌಲಭ್ಯ ಇರುತ್ತದೆ.
ಅಸೋಸಿಯೇಟೆಡ್ ಎಂಟರ್ ಪ್ರೈಸಸ್, ದಾವಣಗೆರೆ.
7019948769, 9739089022, 90605 45500

**Shanthi Agencies**
TVS Showroom-Chitradurga
ಬೇಕಾಗಿದ್ದಾರೆ
Boys-male: 1) Showroom Sales-02
2) Spares Incharge-01 3) Service Executive-02
4)RTO Work-01 5)Service Mechanical-4
Girls : Female : 1) Computer & Cash-2
2) Service Calling-1
Contact : 92432 19553

**ಡುಪ್ಲೆಕ್ಸ್ ಮನೆಗಳು ಮಾರಾಟಕ್ಕಿವೆ**
J.H. PATEL ಬಡಾವಣೆ (University Office) ಹತ್ತಿರ ಉತ್ತರ 30x50, ಶಿವ ಪಾರ್ವತಿ ಬಡಾವಣೆ ಪೂರ್ವ 30x50, ಬಸವೇಶ್ವರ ಬಡಾವಣೆ ಉತ್ತರ 30x60, ಪೂರ್ವ 22x45.
ಐಗೂರು ವಿಜಯಕುಮಾರ್
99457 02495

**PRINCE CORRESPONDENCE COLLEGE**
* ನೇರವಾಗಿ ದ್ವಿತೀಯ ಪಿಯುಸಿಗೆ ಪ್ರವೇಶ ಪಡೆಯಬಹುದು (NIOS)
* Arts, Commerce, Science
* B.A., B.Com., B.Sc., BBM.,
* M.A., M.Com., M.Sc., (all sub)
* Diploma, B.E. MBA., MCA.,
& All Courses
77609 55550, 96200 28627

**WANTED**
Banking Sector tele caller(Female Only)
Qualification - Any Degree
No.2257/5 2nd Floor, M.C.C 'A' Black
Beside Togataveera Kalyana Manatapa
9663072555
Interview time : 11 AM

**G-Shop**
Sales representative
Qualification - PUC or Any degree
Salary : 10,000=00
Contact No.
Nidhi - 9620086824 ,
Akshata - 9071291672
Residential should be Davanagere and Harihar City

**ತುರ್ತಾಗಿ ಬೇಕಾಗಿದ್ದಾರೆ**
ಪರ್ವ ಮಿಲೆಟ್ ಹೆಲ್ತ್ ಮಿಕ್ಸ್ ಸೆಂಟರ್ ಎಂಬ ಕಂಪನಿಗೆ ದಾವಣಗೆರೆ ಹಾಗೂ ಹಾವೇರಿ ಜಿಲ್ಲೆ, ಸಿಟಿ, ತಾಲ್ಲೂಕಿನಾದ್ಯಂತ ಡಿಸ್ಟ್ರಿಬ್ಯೂಟರ್ ಬೇಕಾಗಿದ್ದಾರೆ.
84314 81240

**ಗುಡಾಳ್ ಶ್ರೀಮತಿ ಶಾರದಮ್ಮ ನಿಧನ**



ಶ್ರೀಯುತ ಗುಡಾಳ್ ಶೇಖರಪ್ಪ ಕಿರಾಣಿ ಮರ್ಚೆಂಟ್ ಬಂಬೂ ಬಜಾರ್ ಇವರ ಧರ್ಮಪತ್ನಿ
**ಶ್ರೀಮತಿ ಶಾರದಮ್ಮ**
ಇವರು ದಿನಾಂಕ 18.02.2022 ರ ಶುಕ್ರವಾರ ರಾತ್ರಿ 8-45 ಕ್ಕೆ ಲಿಂಗೈಕ್ಯರಾಗಿದ್ದಾರೆ ಎಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 64 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ದಿನಾಂಕ 19.02.2022 ಶನಿವಾರ ಮೃತರ ಪಾರ್ಥಿವ ಶರೀರವನ್ನು ಅವರ ಸ್ವಗೃಹ ಶಿವಕುಮಾರ ಸ್ವಾಮಿ ಬಡಾವಣೆ, 2ನೇ ಹಂತ C-4ನೇ ಅಡ್ಡರಸ್ತೆ ಇಲ್ಲಿ ದರ್ಶನಕ್ಕೆ ಇಡಲಾಗಿದ್ದು. ನಂತರ ಮಧ್ಯಾಹ್ನ 12-00 ಗಂಟೆಗೆ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಸಂಸ್ಕಾರ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ಶ್ರೀ ಸಿದ್ಧಲಿಂಗೇಶ್ವರ ಟ್ರೇಡರ್ಸ್
ಶ್ರೀ ಗುರು ಬಸವ ಟ್ರೇಡರ್ಸ್
ಮೊ: 94498 55219,
94498 35219 ಜಿ.ಎಸ್. ವೀರಣ್ಣ
95350 10310 ಜಿ.ಎಸ್. ಶಂಭಣ್ಣ


# ಕೃಷಿಯಲ್ಲಿ ಕೃತಕ ಬುದ್ಧಿಮತ್ತೆಗೆ ಒತ್ತು ನೀಡಿ

(1ನೇ ಪುಟದಿಂದ) ಪ್ರಕೃತಿ ಕೊಟ್ಟ ಅಮೂಲ್ಯ ನೀರನ್ನು ಮಿತವಾಗಿ, ಕಾಳಜಿಯಿಂದ ಬಳಕೆ ಮಾಡ ದಿದ್ದರೆ ಮುಂದಿನ ದಿನಗಳಲ್ಲಿ ಸಂಕಷ್ಟಕ್ಕೀಡಾ ಗಬೇಕಾಗುತ್ತದೆ. ಹೆಚ್ಚಿನ ರಸಗೊಬ್ಬರದ ಬಳಕೆಯಿಂದಾಗಿ ಮಣ್ಣಿನಲ್ಲಿ ಹೂತಿಟ್ಟ ಶವಗಳೂ ಕೊಳೆಯದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಭೂಮಿಯ ತಾಪಮಾನ ಹೆಚ್ಚಾಗುತ್ತಿರುವ ಪರಿಣಾಮ ಒಂದು ಕಡೆ ಹೆಚ್ಚು ಮಳೆ, ಮತ್ತೊಂದು ಕಡೆ ಭೀಕರ ಬರಗಾಲ ಉಂಟಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಮಹಾನಗರ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ಮಾತನಾಡುತ್ತಾ, ಒಂದೇ ಸೂರಿನಲ್ಲಿ ಆಧುನಿಕ ಉಪಕರಣಗಳು ಸಿಗುವುದು ಹಾಗೂ ರೈತರ ಗೊಂದಲಗಳನ್ನು ಬಗೆಹರಿಸಿಕೊಳ್ಳಲು ಅನುಕೂಲವಾಗುವುದ ರಿಂದ ಕೃಷಿ ಮೇಳ ರೈತರಿಗೆ ಸಹಕಾರಿಯಾಗಿದೆ ಎಂದು ಹೇಳಿದರು.

ವಿವಿಧ ಕಂಪನಿಗಳ ಮಾಲೀಕರು ರೈತರಿಗೆ ಉಪಕರಣಗಳನ್ನು ಕಡಿಮೆ ಬೆಲೆಗೆ ನೀಡಲು ಪ್ರಯತ್ನಿಸಬೇಕು. ಖರೀದಿ ನಂತರ ಉಪಕರಣಗಳ ಬಳಕೆ ಕುರಿತು ತರಬೇತಿ ನೀಡಬೇಕು ಎಂದು ಹೇಳಿದರು.

ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ರಾಘವೇಂದ್ರ ಪ್ರಸಾದ್ ಮಾತನಾಡುತ್ತಾ, ಇತ್ತೀಚೆಗೆ ಅಡಿಕೆ ಬೆಳೆಯುವವರ ಸಂಖ್ಯೆ ಹೆಚ್ಚಾಗುತ್ತಿದೆ. ಅಡಿಕೆ ತೋಟದಲ್ಲಿ ಅಂತರ ಬೆಳೆಗಳನ್ನು ಬೆಳೆಯಬೇಕು. ಮಿಶ್ರ ಬೆಳೆ ಪದ್ಧತಿ ಅಳವಡಿಸಿಕೊಂಡರೆ ಸುಸ್ಥಿರ ಆದಾಯ ಗಳಿಸಬಹುದು. ಅಲ್ಲದೇ ಹನಿ ನೀರಾವರಿ, ತುಂತುರು ನೀರಾವರಿ ಪದ್ಧತಿ ಬಳಕೆಗೆ ಹೆಚ್ಚಿನ ಒತ್ತು ನೀಡುವಂತೆ ರೈತರಿಗೆ ಸಲಹೆ ನೀಡಿದರು.

ಎಪಿಎಂಸಿ ಅಧ್ಯಕ್ಷ ಕೆ.ಎಸ್. ಚಂದ್ರಶೇಖರ್, ರೈತ ಮುಖಂಡ ತೇಜಸ್ವಿ ಪಟೇಲ್, ಎನ್.ಜಿ. ಪುಟ್ಟಸ್ವಾಮಿ, ಕೆ.ಆರ್. ಹುಲ್ಲುನಾಚೇಗೌಡ, ಲೋಕಿಕೆರೆ ನಾಗರಾಜ್, ಈರಣ್ಣ ರೊಟ್ಟಿ, ಉಮಾಪತಿ ಮತ್ತಿತರರು ಉಪಸ್ಥಿತರಿದ್ದರು.



ಕೃಷಿ ಸಂಬಂಧಿತ ಉಪಕರಣಗಳಾದ ಪಂಪ್ ಸೆಟ್, ಸೋಲಾರ್, ಟ್ರ್ಯಾಕ್ಟರ್‌ಗಳು, ವಿವಿಧ ಬಗೆಯ ತರಕಾರಿ ಬೀಜಗಳು, ಬೇಲಿಗೆ ಬಳಸಲ್ಪಡುವ ತಂತಿಗಳು, ಕೃಷಿ ಯಂತ್ರೋಪಕರಣಗಳು ಸೇರಿದಂತೆ ಸಾವಯವ ಆಹಾರ ಪದಾರ್ಥಗಳು, ಸ್ವ ಸಹಾಯ ಸಂಘಗಳ ಆಹಾರೋತ್ಪನ್ನಗಳು, ಫರ್ನಿಚರ್‌ಗಳ ಮಳಿಗೆಗಳು ಕೃಷಿ ಮೇಳದಲ್ಲಿದ್ದವು. ಕುರಿ ಹಾಗೂ ಕುರಿ ಉತ್ಪನ್ನಗಳ ಫಾರಂನವರೂ ಸಹ ಮೇಳದಲ್ಲಿ ಭಾಗವಹಿಸಿದ್ದರು. ಐದಾರು ಟಗರುಗಳನ್ನು ಪ್ರದರ್ಶನಕ್ಕಿಡಲಾಗಿತ್ತು. ನಗರದಲ್ಲಿ ನಡೆಯಲಿರುವ ದುರ್ಗಾಂಬಿಕಾ ಜಾತ್ರೆ ಹಿನ್ನೆಲೆಯಲ್ಲಿ ಮೇಳಕ್ಕೆ ಬಂದವರು ಕುರಿ ಉತ್ಪನ್ನಗಳತ್ತ ಹೆಚ್ಚಿನ ಗಮನ ನೀಡುತ್ತಿದ್ದುದು ಕಂಡು ಬಂತು.

## ರಾಜ್ಯಮಟ್ಟದ ಕೃಷಿ ಪ್ರಶಸ್ತಿಗೆ 19 ರೈತರು ನೋಂದಣಿ

**(1ನೇ ಪುಟದಿಂದ) ಬೆಳೆದು ರಾಜ್ಯಮಟ್ಟ ದಲ್ಲಿ ಮೂರನೇ ಬಹುಮಾನ ಪಡೆದು, ಸಚಿವರಿಂದ ಸನ್ಮಾನ ಸ್ವೀಕರಿಸಿದ್ದಾರೆ ಎಂದು ಹೇಳಿದರು.**

**ಜಿಲ್ಲೆಯಲ್ಲಿ 1.40 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮುಸುಕಿನ ಜೋಳ ಬೆಳೆಯಲಾಗಿದ್ದು, ರೈತರು 7 ಲಕ್ಷ ಟನ್ ಇಳುವರಿ ಪಡೆದಿದ್ದಾರೆ. ಅಂತರ ಬೆಳೆಯಾಗಿ ತೊಗರಿ ಬೆಳೆಯುವಂತೆ ನೀಡಲಾಗಿದ್ದ ನಮ್ಮ ಕರೆಗೆ ಸುಮಾರು 16 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ತೊಗರಿ ಬೆಳೆಯಲಾಗಿತ್ತು. ಎಕರೆಗೆ 10.12 ಕ್ವಿಂಟಾಲ್ ಇಳುವರಿ ಪಡೆದಿದ್ದಾರೆ ಎಂದರು.**

**ಭತ್ತದ ಬದುವಿನ ಮೇಲೆ ಉದ್ದು ಬೆಳೆ: ಜಿಲ್ಲೆಯಲ್ಲಿ 1.30 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬೆಳೆಯಲಾಗುತ್ತಿದ್ದು, ಭತ್ತದ ಬದುವಿನ ಮೇಲೆ ಪ್ರಾಯೋಗಿಕವಾಗಿ ಉದ್ದು ಬೆಳೆಯಲು ಸಲಹೆ ನೀಡಲಾಗಿತ್ತು. ಈ ಪ್ರಯತ್ನದಲ್ಲಿ ಎಕರೆಗೆ 50 ರಿಂದ 100 ಕೆ.ಜಿ.ವರೆಗೆ ಉದ್ದು ಬೆಳೆದಿದ್ದಾರೆ ಎಂದು ಚಿಂತಾಲ್ ವಿವರಿಸಿದರು.**

## ಇಸ್ಲಾಂನ ಅತ್ಯವಶ್ಯ ಧಾರ್ಮಿಕ ಪದ್ಧತಿಯಲ್ಲ

(1ನೇ ಪುಟದಿಂದ) ಮೂಲಕ ಧಾರ್ಮಿಕ ಅಭ್ಯಾಸದ ಸ್ವಾತಂತ್ರ ನೀಡಲಾಗಿದೆ.

ಯಾರಾದರೂ ಧಾರ್ಮಿಕ ಸ್ವಾತಂತ್ರ್ಯ ಪಾಲಿಸ ಬೇಕಾದರೆ, ಅದನ್ನು ಸಾರ್ವಜನಿಕ ಶಿಸ್ತು, ಆರೋಗ್ಯ ಹಾಗೂ ನೈತಿಕತೆಗೆ ಅನುಗುಣವಾಗಿ ಪಾಲಿಸಬೇಕು ಎಂದು ಅಡ್ವೊಕೇಟ್ ಜನರಲ್ ಹೇಳಿದ್ದಾರೆ.

ಕೊರೊನಾ ಸಂದರ್ಭದಲ್ಲಿ ಸಾರ್ವಜನಿಕ ಆರೋಗ್ಯ ಕ್ಕಾಗಿ ಎಲ್ಲಾ ಧಾರ್ಮಿಕ ಸ್ಥಳಗಳನ್ನು ಮುಚ್ಚಲಾಗಿತ್ತು ಎಂದು ಉದಾಹರಣೆ ನೀಡಿರುವ ಅವರು, ಹಿಜಾಬ್ ಸಹ ನೈತಿಕತೆ, ಆರೋಗ್ಯ ಹಾಗೂ ಸಾರ್ವಜನಿಕ ಸುವ್ಯವಸ್ಥೆಯ ಮಾನದಂಡಗಳಿಗೆ ಒಳಪಡಬೇಕಾಗುತ್ತದೆ ಎಂದಿದ್ದಾರೆ.

ಸಂವಿಧಾನದ 19 (1)(ಎ) ವಿಧಿಯ ಅನ್ವಯ ನಾಗರಿಕರಿಗೆ ಅಭಿವ್ಯಕ್ತಿ ಹಾಗೂ ವಾಕ್ ಸ್ವಾತಂತ್ರ್ಯ ನೀಡಲಾಗಿದೆ. ಇದನ್ನೂ ಸರ್ಕಾರದ ಆದೇಶ ಉಲ್ಲಂಘಿಸಿಲ್ಲ. ಸರ್ಕಾರ ಫೆಬ್ರವರಿ 5ರಂದು ಹೊರಡಿಸಿರುವ ಆದೇಶ ಕಾಯ್ದೆಗೆ ಅನುಗುಣವಾಗಿದೆ, ಇದರಲ್ಲಿ ಆಕ್ಷೇಪಿಸುವಂಥದ್ದೇನು ಇಲ್ಲ ಎಂದಿದ್ದಾರೆ.

2018ರಿಂದಲೂ ಉಡುಪಿ ಸರ್ಕಾರಿ ಪಿ.ಯು. ಕಾಲೇಜಿನಲ್ಲಿ ಸಮವಸ್ತ್ರ ಇತ್ತು. ಆದರೆ, ಕಳೆದ ಡಿಸೆಂಬರ್‌ನಲ್ಲಿ ಕೆಲ ವಿದ್ಯಾರ್ಥಿಗಳು ಹಿಜಾಬ್ ಧರಿಸಲು ಅನುಮತಿ ನೀಡುವಂತೆ ಪ್ರಾಂಶುಪಾಲರ ಬಳಿ ಕೋರಿದಾಗ ಸಮಸ್ಯೆ ಉದ್ಭವಿಸಿತು ಎಂದು ನಾವದಗಿ ಹೇಳಿದ್ದಾರೆ.

ಪ್ರಾಂಶುಪಾಲರು ಅನುಮತಿ ನಿರಾಕರಿಸಿದಾಗ ವಿದ್ಯಾರ್ಥಿನಿಯರು ಪ್ರತಿಭಟನೆ ನಡೆಸಿದರು. ಈ ಬಗ್ಗೆ ತಿಳಿದ ನಂತರ ಸರ್ಕಾರ ಸಮಸ್ಯೆ ಉಲ್ಬಣಿಸದಂತೆ ಉನ್ನತ ಹಂತದ ಸಮಿತಿ ರಚಿಸಿತು. ಆದರೆ, ಈ ವಿಷಯ ಇನ್ನಷ್ಟು ಕಡೆ ಹರಡಿದಾಗ, ಫೆಬ್ರವರಿ 5ರಂದು ರಾಜ್ಯ ಸರ್ಕಾರ ಆದೇಶವೊಂದನ್ನು ಹೊರಡಿಸಿ ಶಾಂತಿ, ಸೌಹಾರ್ದತೆ ಹಾಗೂ ಕಾನೂನು - ವ್ಯವಸ್ಥೆಗೆ ಧಕ್ಕೆ ತರುವ ಯಾವುದೇ ವಸ್ತ್ರ ಧರಿಸದಂತೆ ನಿರ್ಬಂಧಿಸಿತು ಎಂದು ನಾವದಗಿ ಹೇಳಿದ್ದಾರೆ.

ಸಮವಸ್ತ್ರಕ್ಕೆ ಸಂಬಂಧಿಸಿದಂತೆ ಕಾಲೇಜು ಅಭಿವೃದ್ಧಿ ಸಮಿತಿಗೆ ಸ್ವಾಯತ್ತತೆ ನೀಡಲಾಗಿದೆ. ಸಮಿತಿ ನಿರ್ಧರಿಸುವ ಸಮವಸ್ತ್ರವನ್ನು ವಿದ್ಯಾರ್ಥಿಗಳು ಧರಿಸಬೇಕು ಎಂದು ಸರ್ಕಾರ ಆದೇಶಿಸಿದೆ. ಇದರಿಂದ ಅರ್ಜಿದಾರರ ಹಕ್ಕುಗಳ ಉಲ್ಲಂಘನೆಯಾಗಿಲ್ಲ ಎಂದು ನಾವದಗಿ ವಾದಿಸಿದ್ದಾರೆ.

ಸಮವಸ್ತ್ರವು ಸಮಾನತೆ ಹಾಗೂ ಐಕ್ಯತೆಗೆ ಅನುಗುಣವಾಗಿರಬೇಕು ಎಂದಿರುವ ಅವರು, ಸರ್ಕಾರ ಧಾರ್ಮಿಕ ವಿಷಯಗಳಲ್ಲಿ ಮಧ್ಯ ಪ್ರವೇಶಿಸಲು ಬಯಸುವುದಿಲ್ಲ. ಹೀಗಾಗಿಯೇ ಆದೇಶದಲ್ಲಿ ಹಿಜಾಬ್ ಎಂಬ ಪದ ಬಳಸಿಲ್ಲ. ಅರ್ಜಿದಾರರು ಆದೇಶವನ್ನು ಕೋಮು ರೀತಿಯಲ್ಲಿ ತಪ್ಪಾಗಿ ನೋಡಬಾರದು ಎಂದೂ ನಾವದಗಿ ಹೇಳಿದ್ದಾರೆ.

ಶಾಸಕರ ಅಧ್ಯಕ್ಷತೆಯಲ್ಲಿ ರೂಪಿಸಲಾಗಿರುವ ಕಾಲೇಜು ಅಭಿವೃದ್ಧಿ ಸಮಿತಿ ಕಾನೂನು ಬಾಹಿರ ಎಂಬ ಪ್ರೊ. ರವಿ ವರ್ಮ ಕುಮಾರ್ ವಾದವನ್ನು ತಳ್ಳಿ ಹಾಕಿರುವ ಅಡ್ವೊಕೇಟ್ ಜನರಲ್, ಯಾವೊಂದು ಕಾಲೇಜೂ ಸಹ ಸಮಿತಿ ವಿರುದ್ಧ ಕೋರ್ಟ್ ಮೊರೆ ಹೋಗಿಲ್ಲ. ಸಮಿತಿ ಪ್ರಾತಿನಿಧ್ಯದ ಸ್ವರೂಪ ಹೊಂದಿದೆ ಎಂದಿದ್ದಾರೆ.

## ಮರಣದಂಡನೆ

(1ನೇ ಪುಟದಿಂದ) ಗುರಿಯಾದವರು.

ಎಲ್ಲಾ ದೋಷಿಗಳು ತೀರ್ಪು ನೀಡುವಾಗ ವಿಡಿಯೋ ಕಾನ್ಫರೆನ್ಸ್ ಮೂಲಕ ಹಾಜರಿದ್ದರು. ದೋಷಿಗಳು ಅಹಮದಾಬಾದ್‌ನ ಸಾಬರಮತಿ ಕೇಂದ್ರ ಬಂಧೀಖಾನೆ, ದೆಹಲಿಯ ತಿಹಾರ್, ಭೂಪಾಲ್, ಗಯಾ, ಬೆಂಗಳೂರು, ಕೇರಳ ಹಾಗೂ ಮುಂಬೈನ ಜೈಲುಗಳಲ್ಲಿದ್ದಾರೆ.

78 ಆರೋಪಿಗಳ ವಿರುದ್ಧ ವಿಚಾರಣೆ ಆರಂಭಿ ಸಲಾಗಿತ್ತು. ಇವರಲ್ಲಿ ಓರ್ವ ಸರ್ಕಾರಿ ಸಾಕ್ಷಿ ಯಾಗಿ ಪರಿವರ್ತನೆ ಯಾಗಿದ್ದ. ಡಿಸೆಂಬರ್ 2009ರಲ್ಲಿ 77 ಜನರ ವಿರುದ್ಧ ವಿಚಾರಣೆ ಆರಂಭ ವಾಗಿತ್ತು. ಇವರು ಇಂಡಿಯನ್ ಮುಜಾಹಿದ್ದೀನ್ ಸಂಘಟನೆಯ ಜೊತೆ ಸಂಪರ್ಕ ಹೊಂದಿದ್ದಾರೆ ಎಂದು ಆರೋಪಿಸಲಾಗಿತ್ತು. ನಂತರ ಇನ್ನೂ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿತ್ತು. ಆದರೆ, ಅವರ ವಿರುದ್ಧ ಇನ್ನೂ ವಿಚಾರಣೆ ಆರಂಭವಾಗಿಲ್ಲ.


**ಹೊಸಮನೆ ಮಾರಾಟಕ್ಕಿದೆ**
30x50 ರಲ್ಲಿ ಸ್ವಂತಕ್ಕೆ ಕಟ್ಟಿಕೊಂಡಿರುವ ಡೂಪ್ಲೆಕ್ಸ್ ಮನೆ ಶಾಮನೂರಿನ ಯುರೋ ಕಿಡ್ಸ್ ಸ್ಕೂಲ್‌ನ ಹತ್ತಿರ ಸಂಪರ್ಕಿಸಿ
73492 00928

**ಮನೆ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ**
ವಿದ್ಯಾನಗರ, ದಾವಣಗೆರೆ. ಸಂಪರ್ಕಿಸುವ ಸಮಯ : ಬೆಳಿಗ್ಗೆ 11.00 ರಿಂದ ಸಂಜೆ 5.00ವರೆಗೆ
ಫೋ. : 08192 254736

**ನಿಮ್ಮ ಮನೆ ಬಾಡಿಗೆಗೆ/ ಲೀಸ್‌ಗೆ ಖಾಲಿ ಇದೆಯೇ?**
ದಾವಣಗೆರೆ ನಗರದ ಯಾವುದೇ ಬಡಾವಣೆಯಲ್ಲಿ ನಿಮ್ಮ ಮನೆಗಳು ಬಾಡಿಗೆಗೆ/ಲೀಸ್‌ಗೆ ಖಾಲಿ ಇದ್ದರೆ ನಿಮಗೆ ಸೂಕ್ತವಾದ ಬಾಡಿಗೆದಾರರನ್ನು ನಾವು ಪೂರೈಸುತ್ತೇವೆ. (ಯಾವುದೇ ಕಮೀಷನ್ ಇರುವುದಿಲ್ಲ)
THE PROPERTY SERVICES
91489 33445

**ಹುಡುಗರು ಬೇಕಾಗಿದ್ದಾರೆ**
ಬ್ರಾಂಡೆಡ್ ಬಟ್ಟೆ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
98867 57688

**ಸೈಟ್‌ಗಳು ಮಾರಾಟಕ್ಕಿವೆ**
1) 70x63, CORNER ಡಾಲರ್ ಕಾಲೋನಿಯಲ್ಲಿ.
2) 60x50, WEST ಗೆ ಬನಶಂಕರಿ ಲೇಔಟ್‌ನಲ್ಲಿ.
3) 65x147, EAST ಗೆ ಗ್ಲಾಸ್ ಹೌಸ್ ಹತ್ತಿರ
4) 20x30, EAST ಗೆ J.H.PATEL
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**EXCELLENT COACHING CENTER**
Trial Classes for 9th & 10th
CBSE + State Mathematics, Science, Social Science, English
Date: 19 & 20th Feb
STUDY IQ ACADEMY DAVANAGERE
89517 17444, 97402 15992

**WANTED**
BILLING/STORE SALES
BOLAS THE FACTORY OUTLET
DRY FRUIT SHOP
FOR LADIES ONLY
QUALIFICATION : ANY DEGREE WITH COMPUTER KNOWLEDGE
9900708999 / 9448454709

**ಉತ್ತಮ ಗುಣಮಟ್ಟದ ಅಡಿಕೆ ಗೋಟು ಮತ್ತು ಅಡಿಕೆ ಮೊಳಕೆ ಬೀಜಗಳು ದೊರೆಯುತ್ತವೆ**
5 ಕೆಜಿ ಪ್ಯಾಕೆಟ್ ಸಸಿಗಳು ಲಭ್ಯ
ದರ - 100 ರಿಂದ 150 ರೂಪಾಯಿ
ಸ್ಥಳ : ಹೆಚ್. ಕಲಪನಹಳ್ಳಿ.
99456 43545, 99015 58855

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಶ್ರೀ ಸಾಯಿ ಮರದ ಗಾಣದ ಶುದ್ಧ ಶೇಂಗಾ ಎಣ್ಣೆ**
Cold Pressed 100%
Organic Groundnut Oil
# 327, Beside Goshala, P.B. Road, Avaragere, Davangere. Contact :
63620 54750

**ಮನೆ, ಮಳಿಗೆ ಬಾಡಿಗೆಗಿದೆ**
40 ಫೀಟ್ ರೋಡ್, ಡಿಸಿಎಂ ಹಿಂಭಾಗ, ಎಸ್. ಎಸ್. ಹಾಸ್ಪಿಟಲ್ ರೋಡ್, ಶಕ್ತಿ ನಗರ ಸರ್ಕಲ್, ದಾವಣಗೆರೆ ಇಲ್ಲಿ 30x60 ಪೂರ್ವ ಫೇಸ್ ವುಳ್ಳ ಮೊದಲನೆ ಮಹಡಿಯಲ್ಲಿ 2 ಬೆಡ್ ರೂಂವುಳ್ಳ ಮನೆ ಮತ್ತು ಕೆಳಗಡೆ ಮಳಿಗೆ ಬಾಡಿಗೆಗಿದೆ. ಸಂಪರ್ಕಿಸಿ:
99161 79135, 90080 30330

**ನಿಮಗೆ ಮನೆ ಬಾಡಿಗೆಗೆ / ಲೀಸ್‌ಗೆ ಬೇಕಾಗಿದೆಯೇ?**
ದಾವಣಗೆರೆ ನಗರದ ಯಾವುದೇ ಬಡಾವಣೆಗಳಲ್ಲಿ ನಿಮಗೆ ಉತ್ತಮವಾದ 1BHK / 2BHK / 3BHK / 4BHK ಮನೆಗಳು ಬಾಡಿಗೆಗೆ / ಲೀಸ್‌ಗೆ ಬೇಕಾಗಿದ್ದರೆ ಸಂಪರ್ಕಿಸಿ
GOOD HOME PROVIDERS
63616 81919

**ಅಕ್ವಶೈನ್ RO ವಾಟರ್ ಪ್ಯೂರಿಫೈಯರ್**
ನಮ್ಮಲ್ಲಿ ಎಲ್ಲಾ ಕಂಪನಿಯ ವಾಟರ್ ಪ್ಯೂರಿಫೈಯರ್ ಸೇಲ್ಸ್ ಮತ್ತು ಸರ್ವೀಸ್ ಮಾಡಲಾಗುತ್ತದೆ. ಹೋಲ್‌ಸೇಲ್ ದರದಲ್ಲಿ ಎಲ್ಲಾ ಬಿಡಿಭಾಗಗಳು ಲಭ್ಯವಿರುತ್ತವೆ.
ಫೋ. : 99807 27767

**JOBS**
Sales Manager/Executives
Any Degree (English, Computer Knowledge)
Office Job/Marketing/ Field Work, Male/Female
Freshers/Experienced
98444 92888

**WANTED**
Accountant
(Min-1 Year experience in Tally)
Office Boy
KRUSHI TARPAULIN
Opp to Reliance Market
PB Road Davanagere
91087 11555

**ಉದ್ಯೋಗಾವಕಾಶ**
ಯುವಕ/ಯುವತಿಯರಿಗೆ ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ, ಉದ್ಯೋಗಸ್ಥರಿಗೆ ಯಾವುದೇ ಬಂಡಳವಾಳವಿಲ್ಲದೆ ನಿಮ್ಮ ಬಿಡುವಿನ ವೇಳೆಯಲ್ಲಿ ತಿಂಗಳಿಗೆ 10 ಸಾವಿರದಿಂದ 1 ಲಕ್ಷದವರೆಗೆ ಗಳಿಸುವ ನಿಮ್ಮ ಕನಸುಗಳನ್ನು ನನಸು ಮಾಡಿಕೊಳ್ಳುವ ಅದ್ಭುತ ಸುವರ್ಣಾವಕಾಶ
88921 17279, 70194 26891

**ನವರ್ಣ ತಂತ್ರ ಶಕ್ತಿ**
ಜ್ಯೋತಿಷ್ಯ/ಸಂಖ್ಯಾ/ವಾಸ್ತು/ಹಸ್ತ ಶಾಸ್ತ್ರ
ಯಂತ್ರ, ಮಂತ್ರ, ತಂತ್ರ ಹಾಗೂ 6 ತರಹ ವಿದ್ಯೆಯನ್ನು ಕಲಿಸಿಕೊಡಲಾಗುವುದು. ಕಲಿತು ನೀವೇ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದು ಹಾಗೂ ಎಂತಹ ಸಮಸ್ಯೆ ಇದ್ದರೂ ಮಂತ್ರ ಕೊಡಲಾಗುವುದು.
97409 55345

**ಬೋರ್‌ವೆಲ್ ಪಾಯಿಂಟ್**
ವೈಜ್ಞಾನಿಕ ವಿಧಾನದಿಂದ 1000 ಅಡಿವರೆಗೆ.
ಸಂಪರ್ಕಿಸಿ: ಬಸವರಾಜಪ್ಪ ಎಂ.ಟಿ.
ಜಲ ಪರಿಶೋಧಕರು
94492 02888

**ಹೋಟೆಲ್ ಬಾಡಿಗೆಗೆ ಇದೆ**
ವೆಜ್ ಹೋಟೆಲ್ ಬಾಡಿಗೆಗೆ ಇದೆ ಲೋಕಿಕೆರೆ ರೋಡ್ ತುರ್ಚಘಟ್ಟ.
Ph : 95130 33363

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ, ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಟೆರೇಸ್, ಬಾಲ್ಕನಿ, ಸಂಪು, ಗೋಡೆ ಬಿರುಕು, ನೀರಿನ ಟ್ಯಾಂಕ್ ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿರಿ :
80955 09025
ಕೆಲಸ : 100% ಗ್ಯಾರಂಟಿ

**ಪ್ರವಾಸ**
ದಾವಣಗೆರೆಯಿಂದ ಎರಡು ದಿನಗಳ ಗೋವಾ ಪ್ರವಾಸ ದಿ:25.02.2022 ರಿಂದ, ದೋನಪಾಲ್, ಮೀರಾ ಅಮರ್, ಮಾಂಡವಿ ರಿವರ್ ಕ್ರೂಜ್, ಕಲ್ಲಂಗೋಟ್, ಮಂಗೇಶ್ ಟೆಂಪಲ್. ಗೀತಾ ಟ್ರಾವೆಲ್ಸ್ ಮಹಿಳಾ ಸಮಾಜ ಕಾಂಪ್ಲೆಕ್ಸ್ ಅಶೋಕ ರೋಡ್, ದಾವಣಗೆರೆ.
99455 34966, 94481 62499

**ಮಾರಾಟಕ್ಕೆ/ಖರೀದಿಗೆ ವಿಚಾರಿಸಿರಿ**
ಬಸವೇಶ್ವರ ಲೇಔಟ್ 40 ಅಡಿ ರಸ್ತೆ, ಪೂರ್ವಕ್ಕೆ 30x50 ಸೈಟ್, 30x40 ಉತ್ತರ
30x40 3 ಸೈಟ್ ಪೂರ್ವಕ್ಕೆ
ಸುರೇಶ್ 95911 60520

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

## ವೃತ್ತಿ ಶಿಕ್ಷಕರ ಸಂಘದ ಜಿಲ್ಲಾ ಶಾಖೆ ಅಧ್ಯಕ್ಷರಾಗಿ ಎನ್.ವಿ. ಸತೀಶ್ ಆಯ್ಕೆ



ದಾವಣಗೆರೆ, ಫೆ.18- ಕರ್ನಾಟಕ ರಾಜ್ಯ ಸಾರ್ವಜನಿಕ ಶಿಕ್ಷಣ ಇಲಾಖಾ ವೃತ್ತಿ ಶಿಕ್ಷಣ ಶಿಕ್ಷಕರ ಸಂಘದ ದಾವಣಗೆರೆ ಜಿಲ್ಲಾ ಶಾಖೆಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ.

ಗೌರವಾಧ್ಯಕ್ಷರಾಗಿ ಎಂ.ಬಿ. ಜಗದೀಶ್ವರಪ್ಪ, ಅಧ್ಯಕ್ಷರಾಗಿ ಹದಡಿ ಪದವಿ ಪೂರ್ವ ಕಾಲೇಜಿನ ಎನ್.ವಿ. ಸತೀಶ್, ಉಪಾಧ್ಯಕ್ಷರಾಗಿ ಹರಿಹರ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ಶ್ರೀಮತಿ ಯಶೋಧ, ಪ್ರಧಾನ ಕಾರ್ಯದರ್ಶಿಯಾಗಿ ಆವರಗೆರೆ ಸರ್ಕಾರಿ ಪ್ರೌಢಶಾಲೆಯ ಶ್ರೀಮತಿ ಸರಸ್ವತಿ, ಸಹ ಕಾರ್ಯದರ್ಶಿಯಾಗಿ ಜಗಳೂರು ದಿವ್ಯಭಾರತಿ ಪ್ರೌಢಶಾಲೆಯ ಡಿ. ರಮೇಶ್, ಖಜಾಂಚಿಯಾಗಿ ನಾಗನೂರು ಸರ್ಕಾರಿ ಪ್ರೌಢಶಾಲೆಯ ಹೊನ್ನೇಶ್ ಆಯ್ಕೆಯಾಗಿದ್ದಾರೆ.

ಸಂಘಟನಾ ಕಾರ್ಯದರ್ಶಿಗಳಾಗಿ ಹೊನ್ನಾಳಿಯ ಶ್ರೀಮತಿ ಭಾರತಿ, ಹರಿಹರದ ಶ್ರೀಮತಿ ಫರೀದಾ ಬೇಗಂ, ಜಗಳೂರಿನ ಎಂ.ಹೆಚ್. ಮಾಲತೇಶ್, ದಾವಣಗೆರೆ ಉತ್ತರ ವಲಯದ ನಾಗರಾಜನಾಯ್ಕ, ದಕ್ಷಿಣ ವಲಯದ ನಾಗರಾಜ, ಚನ್ನಗಿರಿಯ ಶಿವಣ್ಣ ಆಯ್ಕೆಗೊಂಡಿದ್ದಾರೆ.

## ನಗರದಲ್ಲಿ ಇಂದು ಕೃಷಿ ಮೇಳ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್ ಇಲಾಖೆ, ಯು.ಎಸ್. ಕಮ್ಯುನಿಕೇಶನ್ ಹಾಗೂ ದೇಶಪಾಂಡೆ ಫೌಂಡೇಶನ್ ಸಂಯುಕ್ತಾಶ್ರಯದಲ್ಲಿ ಬಾಲಕರ ಸರ್ಕಾರಿ ಪ್ರೌಢಶಾಲೆ ಮೈದಾನದಲ್ಲಿ 'ಕೃಷಿ ಮೇಳ'ದ 2ನೇ ದಿನದಲ್ಲಿ ಇಂದು ಸಂಜೆ 6.30 ಕ್ಕೆ ಸನ್ಮಾನ ಕಾರ್ಯಕ್ರಮ ನಡೆಯಲಿದೆ. ಡಾ. ಜಿ.ಎಂ. ಸಿದ್ದೇಶ್ವರ, ಡಾ. ಶಾಮನೂರು ಶಿವಶಂಕರಪ್ಪ, ಎಂ.ಪಿ. ರೇಣುಕಾಚಾರ್ಯ, ಎಸ್.ಎ. ರವೀಂದ್ರನಾಥ್, ಎಸ್.ವಿ. ರಾಮಚಂದ್ರ, ಮಾಡಾಳು ವಿರೂಪಾಕ್ಷಪ್ಪ, ಎಸ್. ರಾಮಪ್ಪ, ಪ್ರೊ. ಲಿಂಗಣ್ಣ, ಡಾ. ಕೆ.ಆರ್. ಹುಲ್ಲುನಾಚೇಗೌಡ, ಡಾ. ನಾಗನಗೌಡ ಮಲಕಾಜಿ, ಲೋಕಿಕೆರೆ ನಾಗರಾಜ್ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

## ನಗರದಲ್ಲಿ ಇಂದು ಪುಸ್ತಕ ಬಿಡುಗಡೆ

ಸೇವಾ ಭಾರತಿ ಟ್ರಸ್ಟ್ ವತಿಯಿಂದ ಶ್ರೀ ಹೊ.ವೆ.ಶೇಷಾದ್ರಿಗಳ ಆಯ್ದ ಲೇಖನಗಳ ಸಂಗ್ರಹ 'ಪ್ರಬಂಧ ಸಂಚಯ' ಹಾಗೂ ಶ್ರೀ ಕೃ. ಸೂರ್ಯನಾರಾಯಣರ ಕುರಿತಾದ ಕೃತಿ 'ಉತ್ತುಂಗ' ಪುಸ್ತಕ ಬಿಡುಗಡೆ ಸಮಾರಂಭವನ್ನು ಸದ್ಯೋಜಾತ ಮಠದಲ್ಲಿ ಇಂದು ಸಂಜೆ 5.30ಕ್ಕೆ ಪುಸ್ತಕ ಬಿಡುಗಡೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ. ಸೇವಾ ಭಾರತಿ ಟ್ರಸ್ಟ್‌ನ ಅಧ್ಯಕ್ಷ ಉಮಾಪತಿ ಅಧ್ಯಕ್ಷತೆಯನ್ನು ವಹಿಸುವರು. ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಅಸೋಸಿಯೇಟ್ ಪ್ರೊಫೆಸರ್ ಡಾ. ನಂದನ್ ಪ್ರಭು ಅವರು ಕೃತಿ ಪರಿಚಯ ಮಾಡುವರು. ಸಾಹಿತಿ ಆನಂದ ಋಗ್ವೇದಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

## ಗ್ರಾಮಾಂತರದಲ್ಲಿಂದು ವಿದ್ಯುತ್ ವ್ಯತ್ಯಯ

ಆನಗೋಡು, ಮಾಯಕೊಂಡ ಮತ್ತು ಅತ್ತಿಗೆರೆ ವಿದ್ಯುತ್ ವಿತರಣಾ ಕೇಂದ್ರಗಳಿಂದ ಸರಬರಾಜಾಗುವ 11 ಕೆವಿ ವಿದ್ಯುತ್ ಮಾರ್ಗದಲ್ಲಿ ಬರುವ ವಿವಿಧ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಆನಗೋಡು, ಹನುಮನಹಳ್ಳಿ, ಕೊಗ್ಗನೂರು, ಹೆಬ್ಬಾಳು, ನೀರ್ಥಡಿ, ಶಿವಪುರ, ಹಾಲುವರ್ತಿ, ಗಂಗನಕಟ್ಟೆ, ನೇರ್ಲಿಗಿ, ಚಿನ್ನಸಮುದ್ರ ಹಾಗೂ ಸುತ್ತಮುತ್ತಲಿನ ಗ್ರಾಮಗಳು, ಅತ್ತಿಗೆರೆ, ಕುರ್ಕಿ, ಬಾಡ, ಕಬ್ಬೂರು, ಹಿರೇತೋಗಲೇರಿ, ಗೋಪನಾಳು, ಕಂದಗಲ್ಲು, ರಾಮಗೊಂಡನಹಳ್ಳಿ, ಕಾಶೀಪುರ ಮತ್ತು ಸುತ್ತಮುತ್ತಲಿನ ಗ್ರಾಮಗಳು.

ಮಾಯಕೊಂಡ, ದಿಂಡದಹಳ್ಳಿ, ಬೊಮ್ಮನಹಳ್ಳಿ, ಬಾವಿಹಾಳು, ಬುಳ್ಳಾಪುರ, ಕೊಡಗನೂರು, ನಲ್ಕುಂದ, ಬಸಾಪುರ, ಅಣಬೇರು ಸುತ್ತಮುತ್ತಲಿನ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 9 ರಿಂದ ಮಧ್ಯಾಹ್ನ 2 ರವರೆಗೆ ವಿದ್ಯುತ್ ಇರುವುದಿಲ್ಲ.

## ಪ್ಲಾಸ್ಟಿಕ್ ನಿಷೇಧಕ್ಕೆ ಮಾರ್ಗಸೂಚಿ

**(1ನೇ ಪುಟದಿಂದ)** ತ್ಯಾಜ್ಯ ನಿರ್ವಹಣೆ ಬಲಗೊಳಿಸಲು ಹಾಗೂ ಪ್ಲಾಸ್ಟಿಕ್ ಪರ್ಯಾಯಕ್ಕೆ ಉತ್ತೇಜಿಸಲು ಮುಂದಾಗಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಕೇಂದ್ರ ಪರಿಸರ ಸಚಿವ ಭೂಪೇಂದ್ರ ಯಾದವ್, ಒಂದು ಬಾರಿ ಬಳಕೆ ಮಾಡುವ ಪ್ಲಾಸ್ಟಿಕ್ ಬಳಕೆ ನಿವಾರಿಸಲು ಸಮಗ್ರ ಮಾರ್ಗಸೂಚಿ ಪ್ರಕಟಿಸಲಾಗಿದೆ ಎಂದಿದ್ದಾರೆ.

ಈ ಮಾರ್ಗಸೂಚಿಗಳಿಂದ ತ್ಯಾಜ್ಯ ನಿರ್ವಹಿಸುವ ವಲಯ ಬಲವಾಗುತ್ತದೆ. ಜೊತೆಗೆ ಪ್ಲಾಸ್ಟಿಕ್ ಪರ್ಯಾಯಗಳಿಗೆ ಉತ್ತೇಜನ ಸಿಗಲಿದೆ. ಹೊಸ ಮಾರ್ಗಸೂಚಿಗಳು ತಕ್ಷಣದಿಂದಲೇ ಜಾರಿಗೆ ಬರಲಿವೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಹೊಸ ನಿಯಮಗಳ ಅನ್ವಯ ಪ್ಲಾಸ್ಟಿಕ್‌ಗಳನ್ನು ನಾಲ್ಕು ವರ್ಗಗಳಾಗಿ ವಿಭಜಿಸಲಾಗಿದೆ. ಒರಟಾದ ಪ್ಲಾಸ್ಟಿಕ್ ಪ್ಯಾಕೇಜ್ ಮೊದಲ ವರ್ಗ. ಮೃದುತ್ವ ಹೊಂದಿರುವ ಪ್ಲಾಸ್ಟಿಕ್ ಹಾಳೆಗಳು ಎರಡನೇ ವರ್ಗದವು. ಹಲವು ಪದರಗಳಲ್ಲಿ ಒಂದು ಪದರ ಮಾತ್ರ ಪ್ಲಾಸ್ಟಿಕ್ ಇದ್ದರೆ ಅದು ಮೂರನೇ ವರ್ಗ. ಗೊಬ್ಬರವಾಗಿ ಪರಿವರ್ತನೆಯಾಗುವ ಪ್ಲಾಸ್ಟಿಕ್‌ಗಳು ನಾಲ್ಕನೇ ವರ್ಗದವು.

ಮರುಬಳಕೆಯಾಗುವ ಪ್ಲಾಸ್ಟಿಕ್ ಬಳಕೆ ಹಾಗೂ ಪ್ಲಾಸ್ಟಿಕ್ ಉತ್ಪನ್ನಗಳ ವಿಲೇವಾರಿ, ಮರುಬಳಕೆ ಹಾಗೂ ಅವಧಿ ಮೀರಿದ ನಂತರ ವಿಲೇವಾರಿ, ಆಮದು ಹಾಗೂ ಬ್ರಾಂಡ್ ಮಾಲೀಕತ್ವದ ವಿಷಯಗಳೂ ಆದೇಶದ ವ್ಯಾಪ್ತಿಗೆ ಬಂದಿವೆ. ಉತ್ಪಾದಕರು, ಆಮದುಗಾರರು ಹಾಗೂ ಬ್ರಾಂಡ್ ಮಾಲೀಕರು ಬರುವ ಮುಂದಿನ ಹಣಕಾಸು ವರ್ಷದ ಜೂನ್ 30 ರ ಒಳಗೆ, ಮರು ಬಳಕೆ ಕುರಿತ ಪ್ರಮಾಣ ಪತ್ರವನ್ನು ಸಲ್ಲಿಸಬೇಕಿದೆ.

# ನಗರದಲ್ಲಿ ನಾಳೆ ಲಯನ್ಸ್ ಪ್ರಾಂತೀಯ ಸಮ್ಮೇಳನ 'ಪರಿವರ್ತನೆ'


ದಾವಣಗೆರೆ,ಫೆ.18- ಸಾಮಾಜಿಕ ಸೇವಾ ಚಟುವಟಿಕೆಗಳಿಗೆ ಮತ್ತೊಂದು ಹೆಸರಿನಂತಿರುವ ಲಯನ್ಸ್ ಸಂಸ್ಥೆಯ ಜಿಲ್ಲೆ 317 ಸಿ ಪ್ರಾಂತ್ಯ 9ರ 'ಪ್ರಾಂತೀಯ ಸಮ್ಮೇಳನ - ಪರಿವರ್ತನೆ - 2021-22' ಅನ್ನು ನಾಡಿದ್ದು ದಿನಾಂಕ 20 ರ ಭಾನುವಾರ ನಗರದಲ್ಲಿ ಹಮ್ಮಿಕೊಳ್ಳಲಾಗಿದೆ.

ಉಡುಪಿ, ಶಿವಮೊಗ್ಗ, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳನ್ನೊಳಗೊಂಡ ಜಿಲ್ಲೆ ಲಯನ್ಸ್ 317 ಸಿ ಯಲ್ಲಿರುವ ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿರುವ ದಾವಣಗೆರೆ ಲಯನ್ಸ್ ಕ್ಲಬ್ ಸೇರಿದಂತೆ, 18 ಲಯನ್ಸ್ ಕ್ಲಬ್‌ಗಳನ್ನೊಳಗೊಂಡಿರುವ ಪ್ರಾಂತೀಯ 'ಪರಿವರ್ತನೆ - 22' ಸಮ್ಮೇಳನ ಇದಾಗಿದೆ.

ಸಮ್ಮೇಳನದ ಛೇರ್ಮನ್ ಅಜ್ಜಂಪುರ ಶೆಟ್ರು ಮೃತ್ಯುಂಜಯ ಅವರು ಇಂದು ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ದಾವಣಗೆರೆ ಲಯನ್ಸ್ ಕ್ಲಬ್ ಆತಿಥ್ಯದಲ್ಲಿ ನಾಳೆ ಭಾನುವಾರ ಬೆಳಿಗ್ಗೆ 10 ಗಂಟೆಗೆ ಲಯನ್ಸ್ ಭವನದಲ್ಲಿ ಲಯನ್ಸ್ ಪ್ರಾಂತ್ಯ - 9ರ ಪ್ರಾಂತೀಯ ಅಧ್ಯಕ್ಷ ಇ.ಎಂ. ಮಂಜುನಾಥ ಅವರ ಅಧ್ಯಕ್ಷತೆಯಲ್ಲಿ ಈ ಸಮ್ಮೇಳನ ಆಯೋಜನೆಗೊಂಡಿದೆ.

ಲಯನ್ಸ್ ಪ್ರಾಂತ್ಯ - 9ರ ವ್ಯಾಪ್ತಿಯ ಎಲ್ಲಾ 18 ಕ್ಲಬ್‌ಗಳಿಂದ 36 ಜನರು ಸೇರಿದಂತೆ, ವಿವಿಧ ಕ್ಷೇತ್ರಗಳಲ್ಲಿ ಅನುಪಮ ಸೇವೆ ಸಲ್ಲಿಸುತ್ತಿರುವ 50 ಸಾಧಕರಿಗೆ





'ದೇವನಗರಿ ಸಿರಿ' ಬಿರುದು ಪ್ರದಾನದೊಂದಿಗೆ ಸನ್ಮಾನಿಸಿ, ಗೌರವಿಸುವುದು ಸಮ್ಮೇಳನದ ವಿಶೇಷತೆಗಳಲ್ಲೊಂದಾಗಿದೆ.

ಅಲ್ಲದೇ, ಪ್ರಾಂತೀಯ ಅಧ್ಯಕ್ಷ ಇ.ಎಂ. ಮಂಜುನಾಥ ಅವರು ಹೊಂದಿರುವ 'ಪರೋಪಕಾರಾರ್ಥಂ ಇದಂ ಶರೀರಂ' ಧ್ಯೇಯ ವಾಕ್ಯದಂತೆ ಸಾಮಾಜಿಕ ಸೇವಾ ಚಟುವಟಿಕೆಗಳಿಗೆ ಒತ್ತು ನೀಡುವ ನಿಟ್ಟಿನಲ್ಲಿ ಬಡ ಮಕ್ಕಳಿಗೆ ಸೈಕಲ್, ಮಹಿಳೆಯರಿಗೆ ಬಟ್ಟೆ, ಶ್ರವಣ ಯಂತ್ರ, ಗೋವುಗಳಿಗೆ ಹುಲ್ಲು, ಮಹಿಳೆಯರಿಗೆ ಹೊಲಿಗೆ ಯಂತ್ರ, ವಿಶೇಷ ಚೇತನ ಮಕ್ಕಳಿಗೆ ಸಿಪಿ ವಿತರಣೆ ಸೇರಿದಂತೆ, ಸುಮಾರು 2 ಲಕ್ಷ ರೂ.ಗಳ ವೆಚ್ಚದಲ್ಲಿ ವಿವಿಧ ವಸ್ತುಗಳನ್ನು ದಾನಿಗಳ ನೆರವಿನಿಂದ ವಿತರಿಸುತ್ತಿರುವುದು ಸಮ್ಮೇಳನದ ವೈಶಿಷ್ಟ್ಯ.

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾನಿಲಯದ ಸ್ಥಳೀಯ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ಅವರ ದಿವ್ಯ ಸಾನ್ನಿಧ್ಯದಲ್ಲಿ ಪ್ರಾಂತೀಯ ಅಧ್ಯಕ್ಷ ಇ.ಎಂ. ಮಂಜುನಾಥ ಅವರ ಮಾತೃಶ್ರೀ ಶ್ರೀಮತಿ ಶಕುಂತಲಾ ಮೋಹನ್ ಏಕಬೋಟೆ ಅವರು ಜ್ಯೋತಿ ಬೆಳಗಿಸುವುದರೊಂದಿಗೆ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ.

ಪ್ರಾಂತೀಯ ಸಮ್ಮೇಳನ 'ಪರಿವರ್ತನೆ - 2022' ಸವಿ ನೆನಪಿಗಾಗಿ ಪ್ರಕಟಿಸಿರುವ ಸ್ಮರಣ ಸಂಚಿಕೆಯನ್ನು 'ಜನತಾವಾಣಿ'ಯ ಶ್ರೀಮತಿ ನೀತಾ ವಿಕಾಸ್ ಅವರು ಬಿಡುಗಡೆ ಮಾಡಲಿದ್ದಾರೆ. ಲಯನ್ಸ್ ಮಲ್ಟಿಪಲ್ ಜಿಲ್ಲಾ ತರಬೇತುದಾರರಾದ ರವಿ ಆರ್. ಹೆಗಡೆ ಅವರು ಮುಖ್ಯ ಅತಿಥಿಯಾಗಿ ಮತ್ತು ಲಯನ್ಸ್ ಜಿಲ್ಲೆ 317 ಸಿ ಪ್ರಥಮ ಉಪ ರಾಜ್ಯಪಾಲ ಎಂ.ಕೆ. ಭಟ್ ಅವರು ಗೌರವಾನ್ವಿತ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ.

ರಾಜಸ್ಥಾನದ ಅಬು ಪರ್ವತದಲ್ಲಿರುವ ಈಶ್ವರೀಯ ವಿಶ್ವವಿದ್ಯಾಲಯದ ಪ್ರಧಾನ ಕೇಂದ್ರದ ಧಾರ್ಮಿಕ ವಿಭಾಗದ ಸಂಪರ್ಕಾಧಿಕಾರಿಯೂ ಆಗಿರುವ ಹಿರಿಯ ಧಾರ್ಮಿಕ ಚಿಂತಕ ರಾಜಯೋಗಿ ಬ್ರಹ್ಮಾಕುಮಾರ ರಾಮನಾಥ್ ಜೀ ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಇದೇ ಸಂದರ್ಭದಲ್ಲಿ ಪತ್ರಿಕೋದ್ಯಮದಲ್ಲಿ ಅನನ್ಯ ಸೇವೆ ಸಲ್ಲಿಸುತ್ತಿರುವ 'ಜನತಾವಾಣಿ' ಸಂಪಾದಕ ಎಂ.ಎಸ್. ವಿಕಾಸ್ ಮತ್ತು ಶ್ರೀಮತಿ ನೀತಾ ವಿಕಾಸ್ ದಂಪತಿಯನ್ನು 'ದೇವನಗರಿಯ ಧೀಮಂತ' ಬಿರುದು ಪ್ರದಾನದೊಂದಿಗೆ ಸನ್ಮಾನಿಸಿ, ಗೌರವಿಸಲಾಗುತ್ತದೆ.

ಜೊತೆಗೆ, ವೈದ್ಯಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಅನುಪಮ ಸೇವೆ ಸಲ್ಲಿಸುತ್ತಿರುವ ಹಿರಿಯ ವೈದ್ಯ ಡಾ. ಬಿ.ಎಸ್. ನಾಗಪ್ರಕಾಶ್ ಮತ್ತು ಶ್ರೀಮತಿ ಪದ್ಮಾ ದಂಪತಿಯನ್ನು 'ದೇವನಗರಿಯ ಧೀಮಂತ' ಬಿರುದು ಪ್ರದಾನದೊಂದಿಗೆ ಸನ್ಮಾನಿಸಿ, ಗೌರವಿಸಲಾಗುತ್ತದೆ.

ಜಿಲ್ಲಾ ಲಯನ್ಸ್ ವಿಶ್ರಾಂತ ರಾಜ್ಯಪಾಲರುಗಳಾದ ಹಿರಿಯ ವೈದ್ಯ ಡಾ. ಜಿ. ಶಿವಲಿಂಗಪ್ಪ, ಮತ್ತೋರ್ವ ಹಿರಿಯ ವೈದ್ಯ ಮಲೇಬೆನ್ನೂರಿನ ಡಾ. ಟಿ. ಬಸವರಾಜ್, ಹೆಚ್.ಎನ್. ಶಿವಕುಮಾರ್, ಎ.ಆರ್. ಉಜ್ಜನಪ್ಪ ಅವರುಗಳು ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿರುವರು.

ಸಮ್ಮೇಳನದ ಕಾರ್ಯದರ್ಶಿ ಬೆಳ್ಳೂಡಿ ಶಿವಕುಮಾರ್, ಖಜಾಂಚಿ ಎನ್.ಸಿ. ಬಸವರಾಜ್, ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್. ಓಂಕಾರಪ್ಪ, ಕಾರ್ಯದರ್ಶಿ ಕೋರಿ ಶಿವಕುಮಾರ್, ಖಜಾಂಚಿ ಕಣವಿ ನಟರಾಜ್, ಸಹ ಕಾರ್ಯದರ್ಶಿ ಎಸ್.ಕೆ. ಮಲ್ಲಿಕಾರ್ಜುನ್ ಮತ್ತು ಇತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.


### ಕಾರ್ಯಕ್ರಮದಲ್ಲಿ....

- 2 ಲಕ್ಷ ರೂ.ಗಳ ವೆಚ್ಚದಲ್ಲಿ ಸಾಮಾಜಿಕ ಸೇವಾ ಕಾರ್ಯಗಳು
- ವಿವಿಧ ಕ್ಷೇತ್ರಗಳ 50 ಜನ ಸಾಧಕರಿಗೆ 'ದೇವನಗರಿ ಸಿರಿ' ಬಿರುದು ಪ್ರದಾನದೊಂದಿಗೆ ಸನ್ಮಾನ
- 'ಜನತಾವಾಣಿ' ಸಂಪಾದಕ ಎಂ.ಎಸ್. ವಿಕಾಸ್ ಮತ್ತು ಹಿರಿಯ ವೈದ್ಯ ಡಾ. ಬಿ.ಎಸ್.ನಾಗಪ್ರಕಾಶ್ ಅವರುಗಳಿಗೆ 'ದೇವನಗರಿಯ ಧೀಮಂತ' ಬಿರುದು ಪ್ರದಾನದೊಂದಿಗೆ ಗೌರವಾರ್ಪಣೆ
- ಅಬುಪರ್ವತದ ಹಿರಿಯ ಧಾರ್ಮಿಕ ಚಿಂತಕ ರಾಜಯೋಗಿ ಬ್ರಹ್ಮಾಕುಮಾರ ರಾಮನಾಥ್ ಜೀ ಅವರಿಗೆ 'ದಿವ್ಯ ಪರ್ವತದ ದೇವ ಪುತ್ರ' ಬಿರುದು ಪ್ರದಾನದೊಂದಿಗೆ ಗೌರವ ಮತ್ತು ವಿಶೇಷ ಉಪನ್ಯಾಸ
- ಅಧ್ಯಾತ್ಮಿಕ ಕ್ಷೇತ್ರದ ಸಾಧಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ಅವರಿಗೆ 'ದೇವನಗರಿಯ ದೇವಪುತ್ರಿ' ಬಿರುದು ಪ್ರದಾನದೊಂದಿಗೆ ಗೌರವಾರ್ಪಣೆ

# ಹರಿಹರಕ್ಕೆ ನಾಳೆ ಮುಖ್ಯಮಂತ್ರಿ ಬೊಮ್ಮಾಯಿ

## 30 ಕೋಟಿ ರೂ.ಗಳ ತುಂಗಾರತಿ ಕಾಮಗಾರಿಗೆ ಚಾಲನೆ

ಹರಿಹರ, ಫೆ.18- ನಗರದಲ್ಲಿ ನಾಡಿದ್ದು ದಿನಾಂಕ 20 ರ ಭಾನುವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತುಂಗಭದ್ರಾ ನದಿಯ ದಂಡೆಯ ಮೇಲೆ ತುಂಗಾರತಿ ಕಾರ್ಯಕ್ರಮದ ನಿಮಿತ್ತವಾಗಿ 30 ಕೋಟಿ ರೂ. ವೆಚ್ಚದ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಲಿದ್ದಾರೆ ಎಂದು ಚಂದ್ರಶೇಖರ್ ಪೂಜಾರ್ ತಿಳಿಸಿದ್ದಾರೆ.



ನಗರದ ರಚನಾ ಕ್ರೀಡಾ ಟ್ರಸ್ಟ್ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀ ಪಂಚಮಸಾಲಿ ಗುರುಪೀಠಾಧ್ಯಕ್ಷರಾದ ಶ್ರೀ ವಚನಾನಂದ ಸ್ವಾಮಿಗಳ ಕಲ್ಪನೆ ಉತ್ತರ ಭಾರತದ ಗಂಗಾರತಿ ಆದಂತೆ ಈ ಭಾಗದ ದಕ್ಷಿಣ ಭಾರತದ ತುಂಗಭದ್ರಾ ನದಿಯ ದಂಡೆಯ ಮೇಲೆ ತುಂಗಾರತಿ ಕಾರ್ಯಕ್ರಮದ ಬಗ್ಗೆ ಶ್ರೀಗಳು ತಮ್ಮ ಕಲ್ಪನೆಯನ್ನು ಮುಖ್ಯಮಂತ್ರಿಗಳ ಬಳಿ ಹಂಚಿಕೊಂಡಿದ್ದಾರೆ.

ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ಸ್ಪಂದಿಸುವ ಮೂಲಕ ತುಂಗಭದ್ರಾ ನದಿ ದಂಡೆಯ ಮೇಲೆ ತುಂಗಾರತಿ ಕಾರ್ಯಕ್ಕೆ ಸಂಬಂಧಿಸಿದಂತೆ 30 ಕೋಟಿ ಹಣವನ್ನು ನೀರಾವರಿ ಇಲಾಖೆಯ ವತಿಯಿಂದ ಬಿಡುಗಡೆ ಮಾಡಿ ಟೆಂಡರ್ ಕೂಡ ಮಾಡಲಾಗಿದೆ. ಅದರಲ್ಲಿ ಮೊದಲ ಹಂತದಲ್ಲಿ ಹತ್ತು ಕೋಟಿ ಬಿಡುಗಡೆ ಮಾಡಿದ್ದು ಇದರ ಕಾಮಗಾರಿಗೆ ಚಾಲನೆ ನೀಡುವುದಕ್ಕೆ ಮುಖ್ಯಮಂತ್ರಿಗಳು ಆಗಮಿಸಲಿದ್ದಾರೆ.

ನಗರದ ರಾಘವೇಂದ್ರ ಸ್ವಾಮಿ ಮಠದ ಹಿಂಬದಿಯ ಆವರಣದಲ್ಲಿ ವಿವಿಧ ಕಟ್ಟಡಗಳ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡಲಾಗುತ್ತದೆ. ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಬಸವರಾಜ್ ಭೈರತಿ, ಸಚಿವರಾದ ಗೋವಿಂದ ಕಾರಜೋಳ, ಮುರುಗೇಶ್ ನಿರಾಣಿ, ಸಂಸದರಾದ ಜಿ.ಎಂ. ಸಿದ್ದೇಶ್ವರ್, ಶಾಸಕ ಎಸ್. ರಾಮಪ್ಪ, ಮಾಜಿ ಶಾಸಕ ಬಿ.ಪಿ. ಹರೀಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ಸಿರಿಗೆರೆ ನಾಗನಗೌಡ್ರು ಸೇರಿದಂತೆ ಇತರೆ ಮುಖಂಡರು ಆಗಮಿಸಲಿದ್ದಾರೆ.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯ ರಜನಿಕಾಂತ್, ಹೆಚ್.ಎಸ್. ರಾಘವೇಂದ್ರ, ಪಾಟೀಲ್ ಚಂದ್ರು, ನಿರಂಜನ್ ಪಾಟೀಲ್, ರಾಘವೇಂದ್ರ ಕೊಂಡಜ್ಜಿ ಇತರರು ಹಾಜರಿದ್ದರು.

> **ಮಠ ಆಯೋಜಿಸಿಲ್ಲ**
> ಈ ಕಾರ್ಯಕ್ರಮವನ್ನು ಶ್ರೀ ಪಂಚಮಸಾಲಿ ಪೀಠದ ಮಠದಿಂದ ಆಯೋಜಿಸಿರುವುದಿಲ್ಲ, ಮಠದ ಶ್ರೀಗಳ ಸಹಕಾರ, ಬಿಜೆಪಿ ಪಕ್ಷ ನೆರಳಾಗಿ ಈ ಕಾರ್ಯ ನಡೆಸಲಾಗುತ್ತದೆ.
> **- ಚಂದ್ರಶೇಖರ್ ಪೂಜಾರ್**

**ವೀರೇಶ್ ಹನಗವಾಡಿ ಸ್ಪಷ್ಟನೆ :** ನಗರದಲ್ಲಿ 20 ರಂದು ನಡೆಯುವ ತುಂಗಾರತಿ ಕಾರ್ಯಕ್ರಮದ ಬಗ್ಗೆ ನಮಗೆ ಅಧಿಕೃತವಾಗಿ ಬಿಜೆಪಿ ರಾಜ್ಯ ಘಟಕದಿಂದ ಯಾವುದೇ ರೀತಿಯ ಆದೇಶವನ್ನು ಪಕ್ಷವು ನೀಡಿರುವುದಿಲ್ಲ ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಎಂ ವೀರೇಶ್ ಹನಗವಾಡಿ 'ಜನತಾವಾಣಿ'ಗೆ ತಿಳಿಸಿದರು.

ಚಂದ್ರಶೇಖರ್ ಪೂಜಾರ್ ಅವರಿಗೆ ಪಕ್ಷದಲ್ಲಿ ಯಾವ ಜವಾಬ್ದಾರಿ ಇದೆ? ಪಕ್ಷದಲ್ಲಿ ಏನಾಗಿದ್ದಾರೆ? ಎಂದು ಪ್ರಶ್ನಿಸಿರುವ ವೀರೇಶ್ ಹನಗವಾಡಿ, ಕೆಲವರು ಅನಾವಶ್ಯಕವಾಗಿ ಪಕ್ಷದಲ್ಲಿ ಗೊಂದಲ ಸೃಷ್ಟಿ ಮಾಡಿದ್ದಾರೆ ಎಂದು ಟೀಕಿಸಿದ್ದಾರೆ.

## ಶ್ರೀಶೈಲ ಮಲ್ಲಿಕಾರ್ಜುನ, ಹೇಮರಡ್ಡಿ ಮಲ್ಲಮ್ಮ ದೇಗುಲಗಳ ಪ್ರತಿಷ್ಠಾಪನೆ



ದಾವಣಗೆರೆ, ಫೆ.18- ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಸಮಾಜದ ವತಿಯಿಂದ ನಾಡಿದ್ದು ದಿನಾಂಕ 20 ರ ಭಾನುವಾರ ಬೆಳಿಗ್ಗೆ 11.30 ಕ್ಕೆ ನಗರದ ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ಶ್ರೀಶೈಲ ಮಲ್ಲಿಕಾರ್ಜುನ, ಹೇಮರಡ್ಡಿ ಮಲ್ಲಮ್ಮ, ಶ್ರೀ ವೇಮನ ದೇವಸ್ಥಾನಗಳ ಮೂರ್ತಿ ಪ್ರತಿಷ್ಠಾಪನೆ ಮತ್ತು ಕಳಸಾರೋಹಣ ಸಮಾರಂಭ ನಡೆಯಲಿದೆ ಎಂದು ಸಮಾಜದ ಅಧ್ಯಕ್ಷ ಡಾ. ಕೊಟ್ರೇಶ್ ಬಿದರಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಂದು ಬೆಳಿಗ್ಗೆ 5 ರಿಂದ 11.20 ರವರೆಗೆ ಶ್ರೀಶೈಲ ಮಲ್ಲಿಕಾರ್ಜುನ, ಶ್ರೀ ಹೇಮರಡ್ಡಿ ಮಲ್ಲಮ್ಮ, ಶ್ರೀ ವೇಮನ ದೇವಸ್ಥಾನದ ಮೂರ್ತಿ ಪ್ರತಿಷ್ಠಾಪನೆ ಮತ್ತು ಕಳಸಾರೋಹಣ ಕಾರ್ಯಕ್ರಮ ನಡೆಯಲಿದೆ.

ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು, ಬಾಲೇಹೊಸೂರಿನ ಶ್ರೀ ದಿಂಗಾಲೇಶ್ವರ ಸ್ವಾಮಿಗಳು ಸಾನ್ನಿಧ್ಯ ವಹಿಸಲಿದ್ದಾರೆ. ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಹೇಮರಡ್ಡಿ ಮಲ್ಲಮ್ಮ ಭಾವಚಿತ್ರ ಅನಾವರಣ ಹಾಗೂ ಪುಷ್ಪಾರ್ಚನೆ ಕಾರ್ಯಕ್ರಮವನ್ನು ಡಾ. ಶೇಖರಗೌಡ ಮಾಲೀ ಪಾಟೀಲ್, ಶ್ರೀ ವೇಮನ ಭಾವಚಿತ್ರ ಅನಾವರಣವನ್ನು ಜಿಲ್ಲಾ ರೆಡ್ಡಿ ಸಂಘದ ಅಧ್ಯಕ್ಷ ವೆಂಕಟರಮಣ ನೆರವೇರಿಸಲಿದ್ದಾರೆ. 50 ಲಕ್ಷ ರೂ. ಅಂದಾಜು ವೆಚ್ಚದಲ್ಲಿ ದೇವಸ್ಥಾನ ನಿರ್ಮಾಣ ಮತ್ತು ಎರಡೂವರೆ ಕೋಟಿ ರೂ. ವೆಚ್ಚದ 33 ಕೊಠಡಿಗಳನ್ನು ಒಳಗೊಂಡ ವಿದ್ಯಾರ್ಥಿ ನಿಲಯ ಕಾಮಗಾರಿ ಪ್ರಗತಿಯಲ್ಲಿದೆ ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಮಾಜದ ಮುಖಂಡರಾದ ಡಾ. ಶಂಕರ ಪಾಟೀಲ್, ಬಿ.ಸಿ. ಸಣ್ಣಪ್ಪನವರ್, ಜಿ.ಸಿ. ನಾಮದಾರ ರಡ್ಡೇರ, ರೆಡ್ಡಿ ಜಗದೀಶ್, ಬಿ.ಜಿ. ವಿಶ್ವಾಂಬರ್, ಉಮೇಶ್, ಹರ್ಷ ಪಾಟೀಲ್, ಸುನೀಲ್ ಬಿದರಿ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಶ್ರೀ ಸಿದ್ಧಗಂಗಾ ಡಾ.ಶಿವಕುಮಾರ ಸ್ವಾಮೀಜಿ ಪುಣ್ಯಸ್ಮರಣೆ



ದಾವಣಗೆರೆ - ಶ್ರೀ ಸಿದ್ಧಗಂಗಾ ಡಾ. ಶಿವಕುಮಾರ ಮಹಾಸ್ವಾಮಿಗಳ ಭಕ್ತ ಮಂಡಳಿಯಿಂದ ಡಾ.ಶಿವಕುಮಾರ ಮಹಾಸ್ವಾಮಿಗಳವರ ತೃತೀಯ ಪುಣ್ಯ ಸ್ಮರಣೋತ್ಸವವನ್ನು ಇದೇ 19ರ ಶನಿವಾರ ಸಂಜೆ 6 ಗಂಟೆಗೆ ಎಂಸಿಸಿ 'ಎ' ಬ್ಲಾಕ್‌ನಲ್ಲಿರುವ ಶ್ರೀ ಅಯ್ಯಪ್ಪ ಸ್ವಾಮಿ ದೇವಾಲಯದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಶ್ರೀ ಬಸವಪ್ರಭು ಸ್ವಾಮೀಜಿ ವಹಿಸುವರು. ಹೆಚ್.ವಿ.ವೀರಭದ್ರಯ್ಯ ಅನುಭಾವ ನುಡಿಗಳನ್ನಾಡು ವರು. ಮೈಸೂರಿನ ಶ್ರೀಮತಿ ನೀಲಮ್ಮ ಅವರಿಗೆ ಶವ ಸಂಸ್ಕಾರ ದುರಂಧರೆ ಹಾಗೂ ದಾವಣಗೆರೆಯ ವಿ.ಆರ್.ವೀರಭದ್ರಪ್ಪ ಅವರಿಗೆ ಯೋಗ ಮತ್ತು ಪರಿಸರ ಆರಾಧಕ ಎಂಬ ಪ್ರಶಸ್ತಿ ನೀಡಿ ಸನ್ಮಾನಿಸಲಾಗುವುದು.

## ಕೊಕ್ಕನೂರಿನಲ್ಲಿಂದು ಡಿಸಿ ಗ್ರಾಮ ವಾಸ್ತವ್ಯ


'ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ' ಕಾರ್ಯಕ್ರಮದಡಿ ಹರಿಹರ ತಾಲ್ಲೂಕು ಕೊಕ್ಕನೂರು ಗ್ರಾಮದಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಗ್ರಾಮ ವಾಸ್ತವ್ಯ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ.

ಗ್ರಾಮ ವಾಸ್ತವ್ಯ ಕಾರ್ಯಕ್ರಮದಲ್ಲಿ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕಂದಾಯ ಇಲಾಖೆಯ ವಿವಿಧ ಸೇವೆಗಳು ಅಥವಾ ಯೋಜನೆಗಳಾದ ಪೌತಿ ಖಾತೆ ಬದಲಾವಣೆ, ಸಾಮಾಜಿಕ ಭದ್ರತಾ ಯೋಜನೆ ಪಿಂಚಣಿ ಸೌಲಭ್ಯ, ಅತಿವೃಷ್ಟಿ ಅಥವಾ ಬರ ಪರಿಹಾರ, ಪಡಿತರ ಚೀಟಿ, ಪಹಣಿ ಲೋಪದೋಷ ತಿದ್ದುಪಡಿ ಸೌಲಭ್ಯಗಳನ್ನು ಪಡೆದುಕೊಳ್ಳುವಂತೆ ತಿಳಿಸಲಾಗಿದೆ.

ದಾವಣಗೆರೆ ತಾಲ್ಲೂಕಿನ ಆನಗೋಡು ಹೋಬಳಿಯ ಹೆಬ್ಬಾಳು ಗ್ರಾಮ. ಹೊನ್ನಾಳಿ ತಾಲ್ಲೂಕಿನ ಕಸಬಾ ಹೋಬಳಿಯ ಮಾಸಡಿ. ಚನ್ನಗಿರಿ ತಾಲ್ಲೂಕಿನ ಬಸವಾಪಟ್ಟಣ-2 ಹೋಬಳಿಯ ನಲ್ಕುದುರೆ. ಜಗಳೂರು ತಾಲ್ಲೂಕಿನ ಬಿಳಿಚೋಡು ಹೋಬಳಿಯ ಚದರಗೊಳ್ಳ. ನ್ಯಾಮತಿ ತಾಲ್ಲೂಕಿನ ಗೋವಿನಕೋವಿ-1 ಹೋಬಳಿಯ ತಗ್ಗಿಹಳ್ಳಿ ಗ್ರಾಮಗಳಲ್ಲಿ ಗ್ರಾಮ ವಾಸ್ತವ್ಯ ಕಾರ್ಯಕ್ರಮ ಜರುಗಲಿದೆ ಎಂದು ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ ತಿಳಿಸಿದ್ದಾರೆ.

## ಜಗಳೂರಿನಲ್ಲಿ ಇಂದು ಬೆಸ್ಕಾಂ ಸಭೆ

ಬೆಸ್ಕಾಂ ಗ್ರಾಹಕರ ಸಂವಾದ ಸಭೆಯನ್ನು ಜಗಳೂರು ಉಪ ವಿಭಾಗೀಯ ಕಛೇರಿಯಲ್ಲಿ ಫೆ.19 ರಂದು ಮಧ್ಯಾಹ್ನ 3 ಕ್ಕೆ ನಡೆಯಲಿದೆ.

ಶ್ರೀ ಕುಮಾರ ವಿಜಯ ನಾಟಕ ಸಂಘ (ರಿ.) ಚಿತ್ತರಗಿ.ಇವರಿಂದ

ಎಚ್ಚರ ತಂಗಿ ಎಚ್ಚರ

ಹಾಸ್ಯ ಭರಿತ ಸಾಮಾಜಿಕ ನಾಟಕ

ಪ್ರತಿದಿನ ಎರಡು ಪ್ರದರ್ಶನಗಳು. ಮಧ್ಯಾಹ್ನ 3 ಕ್ಕೆ. ಸಂಜೆ 6ಕ್ಕೆ

ಟಿಕೆಟ್ ದರ: ರೂ.100/-

ದಾವಣಗೆರೆ ಪಿ.ಬಿ. ರಸ್ತೆ, (ಶ್ರೀ ನರಹರಿಶೇಟ್ ಕಲ್ಯಾಣ ಮಂಟಪದ ಎದುರಿಗೆ) ಟಿ.ಎಂ.ಪಿ.ಎನ್. ಕಾಂಪೌಂಡ್‌ನಲ್ಲಿ

ಸಂಚಾಲಕರು : ಮಂಜುನಾಥ್ ಜಾಲ್ಯಾಳ 98803 42862


### ಹೆಸರು ಬದಲಾವಣೆ

KRISHNA KUMAR GOWDA, ಆದ ನಾನು ತಿಳಿಸಿವುದೇನೆಂದರೆ ನನ್ನ ಮಗನ ಜನನ ಮಾವಿನತೋಪ್ ಆಸ್ಪತ್ರೆ, ದಾವಣಗೆರೆ ಇಲ್ಲಿ ಆಗಿದ್ದು, ಪ್ರಮಾಣ ಪತ್ರದಲ್ಲಿ MALLIKARJUNA SUSHMA GOWDA ಎನ್ನುವುದರ ಬದಲಾಗಿ Manomay Sushma Gowda ಎಂದು ತಪ್ಪಾಗಿ ನಮೂದಾಗಿರುತ್ತದೆ. ದಿನಾಂಕ : 08.02.2022 ರಂದು ನೋಟರಿಯವರ ಮುಂದೆ ನನ್ನ ಮಗನ ಹೆಸರನ್ನು MALLIKARJUNA SUSHMA GOWDA ಎಂದು ಪ್ರಮಾಣೀಕರಿಸಿದ್ದೇನೆ. ಇನ್ನು ಮುಂದೆ ನನ್ನ ಮಗನ ಎಲ್ಲಾ ದಾಖಲಾತಿಗಳಲ್ಲೂ MALLIKARJUNA SUSHMA GOWDA ಎಂದು ಇರುತ್ತದೆ.

### ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಶ್ರೀಮತಿ ರೂಪ ಜೆ. ಕೋಂ. ಅನಂತ ಬಿ. ಮತ್ತು ಶ್ರೀಮತಿ ದೀಪ ಬೊಂದಡೆ ಕೋಂ. ಆದಿತ್ಯ ಬಿ. ರವರು ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಇದರ ಕಾನೂನು ಬದ್ಧ ಮಾಲೀಕರಾದ ಶ್ರೀ ಎಸ್. ಜಗದೀಶ್ ಬಿನ್ ಲೇಟ್ ಕೊಟ್ರಪ್ಪ ಸೊಕ್ಕೆ ರವರಿಂದ ಕ್ರಯಕ್ಕೆ ಪಡೆಯಲು ಇಚ್ಛೆವುಳ್ಳವರಾಗಿದ್ದು, ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಬೇರೆ ಯಾವುದೇ ವ್ಯಕ್ತಿ, ಸಂಘ, ಸಂಸ್ಥೆಗಳಿಗೆ, ಬ್ಯಾಂಕ್, ಖಾಸಗಿ ಫೈನಾನ್ಸ್‌ಗಳಿಗೆ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಮಾಲೀಕತ್ವ, ಸ್ವಾಧೀನ ಸಂಬಂಧ, ತಂಟೆ-ತಕರಾರು ಏನಾದರೂ ಇದ್ದಲ್ಲಿ ಸೂಕ್ತ ದಾಖಲಾತಿಗಳೊಡನೆ ಈ ನೋಟಿಸ್ ಪ್ರಕಟವಾದ 7 (ಏಳು) ದಿನದೊಳಗಾಗಿ ಲಿಖಿತ ಮೂಲಕವಾಗಿ ಕೆಳಕಂಡ ವಕೀಲರನ್ನು ಸಂಪರ್ಕಿಸುವುದು. 7 ದಿನಗಳು ಕಳೆದ ನಂತರ ನನ್ನ ಕಕ್ಷಿದಾರರು ಕ್ರಯದ ವ್ಯವಹಾರವನ್ನು ಮಾಡಲು ಅರ್ಹರಾಗಿರುತ್ತಾರೆ. ನಂತರ ತಕರಾರುಗಳು ಏನಾದರೂ ಬಂದಲ್ಲಿ ನಮ್ಮ ಕಕ್ಷಿದಾರರಿಗೆ ಬಂಧನಕಾರಿಯಾಗುವುದಿಲ್ಲ ಅಂತ ಈ ಮೂಲಕ ಪ್ರಕಟಣೆ ನೀಡಲಾಗಿದೆ.

**ಷೆಡ್ಯೂಲ್:** ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ತೆಲಿಗಿ ಹೋಬಳಿ, ರಾಗಿಮಸಲವಾಡ ಗ್ರಾಮದ ರಿ.ಸರ್ವೆ ನಂ. 44/1 ರಲ್ಲಿ 2 ಎಕರೆ 14 ಸೆಂಟ್ಸ್‌ವುಳ್ಳ ಜಮೀನಿಗೆ ಚಕ್ಕುಬಂದಿ. ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: 44/ಎ3, ಸೊಕ್ಕೆ ಮಂಜಪ್ಪ ಇವರ ಜಮೀನು, ಉತ್ತರಕ್ಕೆ: ಸರ್ವೆ ನಂ. 45/1, ಜಗದೀಶಪ್ಪ ಇವರ ಜಮೀನು, ದಕ್ಷಿಣಕ್ಕೆ: ಸರ್ವೆ ನಂ. 44/ಬಿ, ಎಂ.ಎಸ್. ನಿಂಗಪ್ಪ ಇವರ ಜಮೀನು ಹಾಗೂ ರಿ. ಸರ್ವೆ ನಂ. 45/1 ರಲ್ಲಿ 2 ಎಕರೆ, 24 ಸೆಂಟ್ಸ್‌ವುಳ್ಳ ಜಮೀನಿಗೆ ಇದರ ಚಕ್ಕುಬಂದಿ. ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : 45/ಎ1ಬಿ5, ಸೊಕ್ಕೆ ಮಂಜಪ್ಪ ಇವರ ಜಮೀನು, ಉತ್ತರಕ್ಕೆ : ಹಳ್ಳ, ದಕ್ಷಿಣಕ್ಕೆ : ಸರ್ವೆ ನಂ. 44, ಜಗದೀಶಪ್ಪ ಇವರ ಜಮೀನು. ರಿ. ಸರ್ವೆ ನಂ. 44/1 ಮತ್ತು ರಿ. ಸರ್ವೆ ನಂ. 45/1 ಈ ಮೇಲ್ಕಂಡ ಚಕ್ಕುಬಂದಿಗಳ ಮಧ್ಯದಲ್ಲಿರುವ ಜಮೀನು.

**ಸಿದ್ಧಾರ್ಥ ಎನ್.ಹೆಚ್. ವಕೀಲರು**
**# 2455/3, ಶಿವಲೀಲಾ ಸ್ಕ್ಯಾನಿಂಗ್ ಸೆಂಟರ್ ಹತ್ತಿರ,**
**ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ ಮೊ : 9741434799**

# ಹಕ್ಕುಗಳನ್ನು ಕಸಿದುಕೊಳ್ಳುವ ವಾತಾವರಣ ನಿರ್ಮಾಣ

**(1ನೇ ಪುಟದಿಂದ)** ರಾಜಕಾರಣಿಯ ಇತಿಹಾಸವನ್ನು ಇಂದಿನ ರಾಜಕಾರಣಿಗಳು ತಿಳಿದು ನಡೆಯಬೇಕು ಎಂದರು.

ಪಟ್ಟಣದಲ್ಲಿ ಇಮಾಂ ಸಾಹೇಬರ ವಾಸದ ಮನೆ ಪಾಳು ಬಿದ್ದಿದೆ.ಕನಿಷ್ಠ ಪಕ್ಷ ಅವರ ಹೆಸರಿನಲ್ಲಿ ಒಂದು ರಸ್ತೆ ಬದಿ ನಾಮಫಲಕವಿಲ್ಲ. ಅವರ ಪ್ರತಿಮೆಯೂ ಇಲ್ಲದಿರುವುದು ಬೇಸರ ತಂದಿದೆ. ಅವರ ಜನ್ಮ ದಿನದ ಕಾರ್ಯಕ್ರಮಗಳು, ವಿಚಾರಗೋಷ್ಠಿಗಳು ಇಮಾಂ ಸಾಹೇಬರನ್ನು ಮತ್ತೆ ಮತ್ತೆ ಅವಿಸ್ಮರಣೀಯಗೊಳಿಸುತ್ತವೆ ಎಂದು ಹೇಳಿದ ಕುಂ.ವೀ., ಇಮಾಂ ಸಾಹೇಬರ ಸಾಧನೆ ಬಗ್ಗೆ ಕಿರು ಪುಸ್ತಕಗಳನ್ನು ಉಚಿತವಾಗಿ ನೀಡಬೇಕು ಎಂದು ಸಲಹೆ ನೀಡಿದರು.

ಹಿಜಾಬ್ ವಿಷಯದಲ್ಲಿ ಮಕ್ಕಳ ಹಕ್ಕಿನ ಜೊತೆ ರಾಜಕೀಯ ಕೆಸರಾಟ ಸರಿಯಲ್ಲ ಎಂದು ಇದೇ ಸಂದರ್ಭದಲ್ಲಿ ಅವರು ಹೇಳಿದರು.

ಮಾಜಿ ಶಾಸಕ ಎಚ್.ಪಿ.ರಾಜೇಶ್ ಮಾತನಾಡಿ, ದಿ.ಇಮಾಂ ಸಾಹೇಬರು ತಾಲ್ಲೂಕಿನ ಮರೇನಹಳ್ಳಿ ಕುಗ್ರಾಮದಲ್ಲಿ ಜನಿಸಿ ಮೈಸೂರು ಸಂಸ್ಥಾನದಲ್ಲಿ ದಿವಾನರಾಗಿ ಸೇವೆ ಸಲ್ಲಿಸಿ ಸಾಮಾಜಿಕ, ರಾಜಕೀಯ ಕ್ಷೇತ್ರದಲ್ಲಿ ಸಾಧನೆಗೈಯುವುದಲ್ಲದೆ ಕೆರೆಗಳನ್ನು ನಿರ್ಮಿಸಿದ ಕೀರ್ತಿ ಸಲ್ಲುತ್ತದೆ ಎಂದರು.

ಇದೇ ಸಂದರ್ಭದಲ್ಲಿ ರಾಜ್ಯ ಪ್ರಶಸ್ತಿ ಪುರಸ್ಕೃತೆ ಸೂಲಗಿತ್ತಿ ಸುಲ್ತಾನ್ ಬಿ., ನಿವೃತ್ತ ಪ್ರಾಂಶುಪಾಲ ಎಂ,ಬಸವಪ್ಪ, ಸಾಹಿತಿಗಳಾದ ಎನ್.ಟಿ.ಎರ್ರಿಸ್ವಾಮಿ, ಎಂ.ಎಸ್, ಬಸವೇಶ್ ಸಿ.ಎಂ.ಹೊಳೆ, ಕೆ. ರವಿಕುಮಾರ್, ರಂಗಕರ್ಮಿ ಪಿ.ಅಬ್ದುಲ್ಲಾ, ಹೊಸಪೇಟೆ, ಅವರುಗಳಿಗೆ ವಾರ್ಷಿಕ ಪ್ರಶಸ್ತಿ ನೀಡಿ ಸನ್ಮಾನಿಸಿ ಗೌರವಿಸಲಾಯಿತು. ಇಮಾಂ ಟ್ರಸ್ಟ್ ಅಧ್ಯಕ್ಷ ಹುಸೇನ್ ಮಿಯ್ಯಾ, ಶ್ರೀಮತಿ ನೂರ್ ಫಾತಿಮಾ ದಂಪತಿಗಳ 55 ನೇ ವಿವಾಹ ವಾರ್ಷಿಕೋತ್ಸವಕ್ಕೆ ಶುಭ ಹಾರೈಸಲಾಯಿತು.

ಸಮಾರಂಭದಲ್ಲಿ ರಾಜ್ಯ ಪಿಂಜಾರ್ ನದಾಫ್ ಸಂಘದ ಅಧ್ಯಕ್ಷ ಜಲೀಲ್ ಸಾಬ್, ಹೆಚ್.ಇ.ದಾದಾ ಖಲಂದರ್, ಇಮಾಂ ಟ್ರಸ್ಟ್ ಸದಸ್ಯರಾದ ಖಾಸಿಂ ಅಲಿ ಸಾಬ್, ಖಲೀಲ್ ಸಾಬ್, ಮಹಮ್ಮದ್ ಷರೀಫ್, ಮಸ್ತಾನ್ ಸಾಬ್, ಮಹಮದ್ ಹುಸೇನ್, ಕಸಾಪ ಸುಜಾತ, ನಿವೃತ್ತ ಉಪನ್ಯಾಸಕ ಡಿ.ಸಿ. ಮಲ್ಲಿಕಾರ್ಜುನ್ ಮತ್ತಿತರರು ಉಪಸ್ಥಿತರಿದ್ದರು.

## ಇಂದು ಬೆಸ್ಕಾಂ ಸಭೆ

ಬೆಸ್ಕಾಂ ಗ್ರಾಹಕರ ಸಭೆಯು ದಾವಣಗೆರೆ ಗ್ರಾಮೀಣ ಉಪ ವಿಭಾಗದ ಕಛೇರಿ ಆವರಣದಲ್ಲಿ ಇಂದು ಮಧ್ಯಾಹ್ನ 3.30 ರಿಂದ ಸಂಜೆ 5 ರವರೆಗೆ ನಡೆಯಲಿದೆ ಎಂದು ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಗ್ರಾಮೀಣ ಉಪ ವಿಭಾಗ ಬೆವಿಕಂ ದಾವಣಗೆರೆ ಡಿ. ಸುಧೀರ್ ಕುಮಾರ್ ತಿಳಿಸಿದ್ದಾರೆ.

## ಹರಿಹರದಲ್ಲಿಂದು ಬೆಸ್ಕಾಂ ಸಭೆ

ಬೆವಿಕಂ ಹರಿಹರ ಉಪ ವಿಭಾಗದ ಕಚೇರಿಯಲ್ಲಿ ಇಂದು ಮಧ್ಯಾಹ್ನ 3 ರಿಂದ ಸಂಜೆ 5.30 ರವರೆಗೆ ವಿದ್ಯುತ್ ಗ್ರಾಹಕರ ಸಭೆ ನಡೆಯಲಿದೆ.

### ಇಲಾಖಾ ಮಧ್ಯಸ್ಥದಾರರು ಹಾಗೂ ಸಹಕಾರ ಅಭಿವೃದ್ಧಿ ಅಧಿಕಾರಿ ಸಹಕಾರ ಸಂಘಗಳ ಉಪನಿಬಂಧಕರ ಕಛೇರಿ ದಾವಣಗೆರೆ ಜಿಲ್ಲೆ, ದಾವಣಗೆರೆ.

**ತಿಳುವಳಿಕೆ ನೋಟಿಸ್**

**ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ-1959ರ ಕಲಂ 70 ರಡಿ ದಾಖಲಿಸಿದ ದಾವಾ ಸಂಖ್ಯೆ : ಡಿ.ಆರ್./ಡಿ.ವಿ.ಜಿ./18/2021-22**

ವಿಶ್ವಕರ್ಮ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ದಾವಣಗೆರೆ. ಇದರಲ್ಲಿ ಆಧಾರ ಸಾಲ ಪಡೆದು ಸುಸ್ತಿದಾರರಾಗಿರುವ ಶ್ರೀ ಪ್ರಹ್ಲಾದ್ ಆರ್. ಬಿನ್ ರಾಮಚಂದ್ರಪ್ಪ ಹಾಗೂ ಜಾಮೀನುದಾರರಾದ (1) ಶ್ರೀ ಚಂದ್ರಾಚಾರ್ ಬಿ.ಆರ್. ಬಿನ್ ರುದ್ರಾಚಾರ್ (2) ಶ್ರೀಮತಿ ಸುಧಾ ಬಿ. ಬಿನ್ ಬಸವರಾಜಪ್ಪ ಇವರ ವಿರುದ್ಧ ಕ.ಸ.ಸಂ. ಕಾಯ್ದೆ 1956ರ ಕಲಂ 70 ರಡಿ ದಾವೆ ದಾಖಲಾಗಿದ್ದು, ದಾವೆಯ ವಿಚಾರಣೆಗೆ ನಿಯಮಾನುಸಾರ ನೋಟಿಸ್ ಜಾರಿಗೊಳಿಸಲಾಗಿದ್ದು, ಆದಾಗ್ಯೂ ಸಹ ನೀವು ವಿಚಾರಣೆಗೆ ಗೈರು ಹಾಜರಾಗಿರುತ್ತೀರಿ. ಪ್ರಯುಕ್ತ ದಿನಾಂಕ : 03.03.2022 ರಂದು ಮಧ್ಯಾಹ್ನ 4.00 ಗಂಟೆಗೆ ವಿಶ್ವಕರ್ಮ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ವಸಂತ ರಸ್ತೆ, ದಾವಣಗೆರೆ. ಇಲ್ಲಿ ನಡೆಯಲಿರುವ ದಾವೆಯ ವಿಚಾರಣೆಗೆ ಖುದ್ದು ಹಾಜರಾಗಲು ಸೂಚಿಸಿದೆ. ತಪ್ಪಿದಲ್ಲಿ ತಮ್ಮ ಗೈರು ಹಾಜರಾತಿಯನ್ನು ಎಕ್ಸ್‌ಪಾರ್ಟೆ ಎಂದು ಪರಿಗಣಿಸಿ ದಾವೆಯನ್ನು ಇತ್ಯರ್ಥಗೊಳಿಸಲಾಗುವುದು.

**ಸ್ಥಳ : ದಾವಣಗೆರೆ.**
**ದಿನಾಂಕ : 18.02.2022**

**ಸಹಿ/- ಜಯಪ್ರಕಾಶ್ ಕೆ.ಜಿ.**
**ಇಲಾಖಾ ಗೌರವ ಮಧ್ಯಸ್ಥದಾರರು ಹಾಗೂ ಸಹಕಾರ ಅಭಿವೃದ್ಧಿ ಅಧಿಕಾರಿ ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿ ದಾವಣಗೆರೆ ಜಿಲ್ಲೆ, ದಾವಣಗೆರೆ.**

### ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿಯಮಿತ, ದಾವಣಗೆರೆ.

ಆಡಳಿತ ಕಚೇರಿ, 79/2, ಪೂನಾ-ಬೆಂಗಳೂರು ರಸ್ತೆ, ದಾವಣಗೆರೆ. ಫೋನ್ ನಂ. 08912 272570

**ಸ್ಥಿರಾಸ್ತಿ ಬಹಿರಂಗ ಹರಾಜನ್ನು ಮುಂದೂಡಿರುವ ಬಗ್ಗೆ ತಿಳುವಳಿಕೆ**

ಸೆಕ್ಯೂರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಅಧಿನಿಯಮ 2002ರ ಅಡಿಯಲ್ಲಿ ಶ್ರೀ ಎಂ. ರವಿಶಂಕರ್, ಬಿನ್ ಎಂ. ರಂಗನಾಥಂ ಮತ್ತು ಶ್ರೀಮತಿ ಎಂ. ಕವಿತಾ ಶಂಕರ್ ಕೋಂ. ಎಂ. ರವಿಶಂಕರ್, ಡೋರ್ ನಂ. 116/17, 10ನೇ ಕ್ರಾಸ್, ಕಿರುವಾಡಿ ಲೇಔಟ್, ಕಾವೇರಮ್ಮ ಶಾಲೆ ಹತ್ತಿರ, ಕೆ.ಬಿ. ಬಡಾವಣೆ, ದಾವಣಗೆರೆ ಇವರ ಸುಸ್ತಿ ಸಾಲದ ಬಾಬ್ತು ದಿನಾಂಕ : 22.02.2022 ರ ಮಂಗಳವಾರ ಬೆಳಿಗ್ಗೆ 11.30 ಗಂಟೆಗೆ ನಡೆಯಲಿರುವ ಸ್ಥಿರಾಸ್ತಿಯ ಬಹಿರಂಗ ಹರಾಜನ್ನು ಕಾರಣಾಂತರದಿಂದ ಮುಂದಿನ ದಿನಾಂಕದವರೆಗೆ ಮುಂದೂಡಲಾಗಿದೆ.

**ಸ್ಥಳ : ದಾವಣಗೆರೆ.**
**ದಿನಾಂಕ : 15.02.2022**

**ಸಹಿ/- ಅಧಿಕೃತ ಅಧಿಕಾರಿ ಹಾಗೂ ಪ್ರಧಾನ ವ್ಯವಸ್ಥಾಪಕರು**



ಶ್ರೀನಿವಾಸ ಹೋಂಡಾ

ಅಧಿಕೃತ ಹೋಂಡಾ ದ್ವಿಚಕ್ರ ವಾಹನದ ಮಾರಾಟಗಾರರಿಂದ ಆಹ್ವಾನ, ದಾವಣಗೆರೆ ಜಿಲ್ಲೆ ಸಂತೇಬೆನ್ನೂರಲ್ಲಿ ಹೋಂಡಾ ದ್ವಿಚಕ್ರ ವಾಹನದ ಅಧಿಕೃತ ಸರ್ವೀಸ್ ಸೆಂಟರ್‌ಗೆ ಆಹ್ವಾನಿಸುತ್ತಿದ್ದೇವೆ. ಆಸಕ್ತಿವುಳ್ಳವರು ಈ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ



ಹದಡಿ ಮೇನ್ ರೋಡ್, ದಾವಣಗೆರೆ
ಫೋನ್ ನಂ : 8884445242

# ಶ್ರೀ ಶಿವಾಜಿ ಮಹಾರಾಜರ ಜಯಂತಿ, ಮೆರವಣಿಗೆ ರದ್ದು



**ನಗರದಲ್ಲಿ ಇಂದು**

ಶ್ರೀ ಶಿವ ಛತ್ರಪತಿ ಶಿವಾಜಿ ಮಹಾರಾಜರ 395ನೇ ಜಯಂತ್ಯೋತ್ಸವವನ್ನು ಡಿ. ದೇವರಾಜ ಅರಸು ಬಡಾವಣೆ ಬಿ ಬ್ಲಾಕ್‌ನಲ್ಲಿರುವ ಶ್ರೀ ಕೃಷ್ಣ ಭವಾನಿ (ಅಂಬಾ ಭವಾನಿ) ಕಲ್ಯಾಣ ಮಂಟಪದಲ್ಲಿ ಇಂದು ಹಮ್ಮಿಕೊಳ್ಳಲಾಗಿದೆ.

ಮುಂಜಾನೆ 6 ಗಂಟೆಗೆ ಶ್ರೀ ಕೃಷ್ಣಬಾಯಿ ಅಮ್ಮನವರ ದೇವಸ್ಥಾನದ ಆವರಣದಲ್ಲಿ ಶ್ರೀ ಪಾತಾಳ ಲಿಂಗೇಶ್ವರ ಸ್ವಾಮಿ ಮತ್ತು ಶ್ರೀ ಕೃಷ್ಣಬಾಯಿ ಅಮ್ಮನವರಿಗೆ ಅಭಿಷೇಕ, ಅರ್ಚನೆ, ಬನ್ನಿ ಮಹಾಂಕಾಳಿ ಪೂಜೆ, ಬೆಳಿಗ್ಗೆ 6.30ಕ್ಕೆ ಶ್ರೀ ಸತ್ಯನಾರಾಯಣ ಸ್ವಾಮಿ ಪೂಜೆ, ಬೆಳಿಗ್ಗೆ 8 ಗಂಟೆಗೆ ತೊಟ್ಟಿಲು ಪೂಜೆ, ಬೆಳಿಗ್ಗೆ 11 ಗಂಟೆಗೆ ಕೃಷ್ಣಭವಾನಿ ಕಲ್ಯಾಣ ಮಂಟಪದಲ್ಲಿ ಸಭಾ ಕಾರ್ಯಕ್ರಮಗಳು ಏರ್ಪಾಡಾಗಿವೆ.

ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಈ ಎಲ್ಲಾ ಕಾರ್ಯಕ್ರಮಗಳು ನಡೆಯಲಿದ್ದು, ಶ್ರೀ ಬಸವ ಪ್ರಭು ಸ್ವಾಮೀಜಿ ದಿವ್ಯ ಸಾನ್ನಿಧ್ಯ ಮತ್ತು ಸಮಾಜದ ಅಧ್ಯಕ್ಷ ಡಿ.ಮಾಲತೇಶರಾವ್ ಜಾಧವ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಸಮಾಜದ ಗೌರವಾಧ್ಯಕ್ಷ ಯಶವಂತರಾವ್ ಜಾಧವ್ ತಿಳಿಸಿದ್ದಾರೆ. ಅದೇ ದಿನ ಸಂಜೆ 5 ಗಂಟೆಗೆ ನಡೆಸಲುದ್ದೇಶಿಸಿದ್ದ ಛತ್ರಪತಿ ಶಿವಾಜಿ ಮಹಾರಾಜರ ಮೆರವಣಿಗೆಯನ್ನು ಕೊರೊನಾ ಹಿನ್ನೆಲೆಯಲ್ಲಿ ಸರ್ಕಾರ ರೂಪಿಸಿರುವ ಮಾರ್ಗಸೂಚಿಯನ್ವಯ ರದ್ದುಪಡಿಸಲಾಗಿದೆ ಎಂದು ಕಾರ್ಯದರ್ಶಿ ಜಿ.ಯಲ್ಲಪ್ಪ ಡಮಾಳೆ, ಖಜಾಂಚಿ ಎಂ. ಗೋಪಾಲರಾವ್ ಮಾನೆ ವಿವರಿಸಿದ್ದಾರೆ.

# ಬಳ್ಳಾರಿ ಜಿಲ್ಲಾ ಆಸ್ಪತ್ರೆಯ ಆರೋಗ್ಯ ರಕ್ಷಾ ಸಮಿತಿಗೆ ರಾಘುವೇಂದ್ರ ಶೆಟ್ಟಿ



ಹರಪನಹಳ್ಳಿ, ಫೆ. 18- ಬಳ್ಳಾರಿ ಜಿಲ್ಲಾ ಆಸ್ಪತ್ರೆಯ ಆರೋಗ್ಯ ರಕ್ಷಾ ಸಮಿತಿಗೆ ತಾಲ್ಲೂಕಿನ ಬಿಜೆಪಿ ಮುಖಂಡ ಕೆ. ರಾಘುವೇಂದ್ರ ಶೆಟ್ಟಿ ಅವರು ನಾಮ ನಿರ್ದೇಶಕ ಸದಸ್ಯರಾಗಿ ನೇಮಕಗೊಂಡಿದ್ದಾರೆ. ಆಸ್ಪತ್ರೆಗೆ ಒಟ್ಟು ಆರು ಜನ ಸದಸ್ಯರನ್ನು ಸಮಿತಿಗೆ ನೇಮಕ ಮಾಡಿ ಆದೇಶಿಸಲಾಗಿದೆ. ಬಿ.ಇ. ಬೀರಬ್ಬಿ ಬಸವರಾಜ್ ಹಡಗಲಿ, ಎಸ್. ಬಾಲಸುಬ್ರಹ್ಮಣ್ಯ ಸಂಡೂರು, ಗೋಗಿನೇನಿ ವೆಂಕಟಸುಬ್ಬರಾವ್ ಸಿರುಗುಪ್ಪ, ಎಸ್.ವಿ. ಹನುಮಂತಪ್ಪ ಕೊಟ್ಟೂರು, ಶ್ರೀಮತಿ ಟಿ. ರುಬಿಯಾ ಕಂಪ್ಲಿ ಅವರುಗಳನ್ನು ಬಳ್ಳಾರಿ ಜಿಲ್ಲಾ ಆಸ್ಪತ್ರೆಯ ಆರೋಗ್ಯ ರಕ್ಷಾ ಸಮಿತಿ ಸದಸ್ಯರಾಗಿ ನೇಮಕಗೊಂಡಿದ್ದಾರೆ.

# ಸಾರ್ವಜನಿಕ ಸ್ಮರಣ ಶಕ್ತಿ ತುಂಬಾ ದುರ್ಬಲ

ದಾವಣಗೆರೆ, ಫೆ. 18- ಸಾರ್ವಜನಿಕ ಸ್ಮರಣ ಶಕ್ತಿ ತುಂಬಾ ದುರ್ಬಲ. ಯಾರು ಮನೆ, ಸಮಾಜ, ದೇಶಕ್ಕಾಗಿ ದುಡಿದಿರುತ್ತಾರೋ ಅಂತಹವರನ್ನು ಬಹುಬೇಗ ಮರೆಯುವಂತಹ ಸ್ವಭಾವ ಇತ್ತೀಚಿನ ದಿನಮಾನಗಳಲ್ಲಿ ಹೆಚ್ಚಾಗುತ್ತಿದೆ ಎಂದು ಸಾಣೇಹಳ್ಳಿಯ ಶ್ರೀ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಜಾಗತಿಕ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕ ಹಾಗೂ ಬಸವ ಬಳಗ ಇವರ ಸಂಯುಕ್ತಾಶ್ರಯದಲ್ಲಿ ನಗರದ ಲಕ್ಷ್ಮಿ ವೃತ್ತದಲ್ಲಿನ ಹರ್ಡೇಕರ್ ಮಂಜಪ್ಪ ವೃತ್ತದಲ್ಲಿ ನವೀಕರಣ ಪುತ್ಥಳಿಯ ಉದ್ಘಾಟನೆ ಹಾಗೂ ಹರ್ಡೇಕರ್ ಮಂಜಪ್ಪನವರ ಜಯಂತಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಒಂದು ವೇಳೆ ಅಂತವರ ಸ್ಮರಣೆ ಮಾಡಿಕೊಳ್ಳಲು ಮೂರ್ತಿ ಮಾಡಿ ಕೈಬಿಟ್ಟರೆ ಸಾಕು ಎಂದು ಭಾವಿಸುತ್ತಾರೆ. ವ್ಯಕ್ತಿಗಳ ಆದರ್ಶ ಮೂರ್ತಿಗಳಲ್ಲಿ ಇಲ್ಲ. ಆ ವ್ಯಕ್ತಿಗಳ ಬದುಕು ಹೇಗಿತ್ತು ಎಂದು ಗಮನಿಸಬೇಕಾಗುತ್ತದೆ ಎಂದರು.

ಹುಟ್ಟಿನಿಂದ ಯಾವ ವ್ಯಕ್ತಿ ಕೂಡ ದೊಡ್ಡವನಾಗಲು ಸಾಧ್ಯವಿಲ್ಲ. ಸತತ ಪರಿಶ್ರಮ, ಸಾಧನೆಯಿಂದ ಮಾತ್ರ ಶ್ರೇಷ್ಠ ವ್ಯಕ್ತಿ ಎನಿಸಿಕೊಳ್ಳಲು ಸಾಧ್ಯ. ಹರ್ಡೇಕರ್ ಮಂಜಪ್ಪ ಸಹ ತಮ್ಮ ಸಾಧನೆ ಮೂಲಕ ವಿಭೂತಿ ಪುರುಷರಾದರು ಎಂದು ಹೇಳಿದರು.


ಹರ್ಡೇಕರ್ ಅವರು ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಅಪರೂಪದ ಕಾರ್ಯವನ್ನು ಮಾಡಿ ಸ್ಮರಣೀಯರಾದರು. ಮದುವೆಯಾಗದೇ ತ್ಯಾಗಜೀವಿಯಾಗಿ ಸಮಾಜವನ್ನು ಬೆಳೆಸಿದರು. ಬಸವ ತತ್ವವನ್ನು ಚಾಚೂ ತಪ್ಪದೇ ಪಾಲಿಸಿದ ಶ್ರೇಷ್ಠ ಸಂತ ಎಂದು ಮಂಜಪ್ಪ ಅವರ ಸೇವಾ ಕಾರ್ಯವನ್ನು ಸ್ಮರಿಸಿದರು.

ವಿರಕ್ತ ಮಠದ ಶ್ರೀ ಬಸವ ಪ್ರಭು ಸ್ವಾಮೀಜಿ ಮಾತನಾಡಿ, ರಾಷ್ಟ್ರಧರ್ಮ ಮತ್ತು ಬಸವ ಧರ್ಮ ಹರ್ಡೇಕರ್ ಮಂಜಪ್ಪನವರ ಎರಡು ಕಣ್ಣುಗಳಿದ್ದಂತೆ. ಮಹಾತ್ಮ ಗಾಂಧೀಜಿಯವರ ಸರಳತೆಯನ್ನು ಮೈಗೂಡಿಸಿಕೊಂಡಿದ್ದ ಹರ್ಡೇಕರ್ ವಿಭೂತಿ ಪುರುಷರಾಗಿದ್ದರು ಎಂದು ಹೇಳಿದರು.

1911 ಜೂನ್ 26 ರಂದು ಭಜನಾ ಸಂಘವನ್ನು ಸ್ಥಾಪಿಸುವ ಮೂಲಕ ಅಂದು ಪ್ರಾರಂಭವಾದ ಪ್ರವಚನ ಪ್ರತಿ ಶ್ರಾವಣ ಮಾಸದಲ್ಲಿ ನಿತ್ಯ ನಡೆಯುತ್ತಲೇ ಬಂದಿದೆ. ಬಾಲಗಂಗಾಧರ ತಿಲಕ್ ಆರಂಭಿಸಿದ ಗಣೇಶೋತ್ಸವದಂತೆ ಹರ್ಡೇಕರ್ ಬಸವ ಜಯಂತಿಯನ್ನು ಪ್ರಾರಂಭಿಸುವ ಮೂಲಕ ಇತಿಹಾಸ ಸೃಷ್ಟಿಸುವ ಕಾರ್ಯವನ್ನು ಮಾಡಿದ್ದಾರೆಂದರು.

ಬಸವ ಬಳಗದ ಶತಾಯುಷಿ ವಿ. ಸಿದ್ಧರಾಮ ಶರಣರು, ಎ.ಹೆಚ್. ಹುಚ್ಚಪ್ಪ ಮಾಸ್ತರ್, ಪಾಲಿಕೆ ಮಾಜಿ ನಾಮನಿರ್ದೇಶನ ಸದಸ್ಯೆ ಹೆಚ್.ಸಿ. ಜಯಮ್ಮ, ಹಾಲಿ ಸದಸ್ಯ ಸೋಗಿ ಶಾಂತಕುಮಾರ್ ಮಾತನಾಡಿದರು.

ಇದೇ ವೇಳೆ ಬಸವ ಕಲಾ ಲೋಕದ ಶಶಿಧರ ಬಸಾಪುರ ಅವರನ್ನು ಸನ್ಮಾನಿಸಲಾಯಿತು. ಪಾಲಿಕೆ ಮಾಜಿ ನಾಮನಿರ್ದೇಶನ ಸದಸ್ಯ ಶಿವನಗೌಡ ಪಾಟೀಲ್, ಹಾಲಿ ಸದಸ್ಯ ಆರ್.ಎಲ್. ಶಿವಪ್ರಕಾಶ್, ಹಿರಿಯ ಪತ್ರಕರ್ತ ಬಕ್ಕೇಶ್ ನಾಗನೂರು, ಮಹಾಂತೇಶ್ ಅಗಡಿ ಮತ್ತಿತರರು ಉಪಸ್ಥಿತರಿದ್ದರು.





## ಬಟ್ಟೆಗಿಂತ ಬದುಕು ಮುಖ್ಯ

**ಪ್ರತಿಯೊಬ್ಬ ಮನುಷ್ಯನಿಗೂ ಬಟ್ಟೆಗಿಂತ ಬದುಕು ತುಂಬಾ ಮುಖ್ಯ. ಕೇವಲ ಬಟ್ಟೆ ಕಾರಣಕ್ಕಾಗಿ ಆರಂಭವಾದ ಸಂಘರ್ಷದಲ್ಲಿ ಬದುಕನ್ನು ಹಾಳು ಮಾಡಿಕೊಳ್ಳಬಾರದು ಎಂದು ಸಾಣೇಹಳ್ಳಿ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅಭಿಪ್ರಾಯ ವ್ಯಕ್ತಪಡಿಸಿದರು.**

**ಇಜಾಬ್- ಕೇಸರಿ ವಿವಾದ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಶ್ರೀಗಳು, ಬಸವ ತತ್ವ ಪಾಲನೆ ಮೂಲಕ ಸಾಮರಸ್ಯದ ಜೀವನ ಮಾಡುವ ಅವಶ್ಯವಿದೆ. ವಿದ್ಯಾರ್ಥಿ ಸಮೂಹವನ್ನು ಗುರಿಯನ್ನಾಗಿರಿಸಿಕೊಂಡು ಜಾತಿಯ ವಿಷ ಬೀಜ ಬಿತ್ತುವ ಕೆಲಸ ನಡೆದಿದೆ ಎಂದರು. ಬಟ್ಟೆ, ಕಾವಿ, ಖಾಕಿ, ಖಾದಿ ಯಾವುದಾದರೇನು ಬಟ್ಟೆಗಳಿಗಿಂತ ಅವರ ಬದುಕು ಮುಖ್ಯ. ಇದನ್ನು ಅರಿತು ಪ್ರತಿಯೊಬ್ಬರೂ ಸಾಮರಸ್ಯದ ಜೀವನದತ್ತ ಮುನ್ನಡೆಯಬೇಕಾಗಿದೆ ಎಂದು ಹಿತ ನುಡಿದರು. ಜಾತಿ ಮನೋಭಾವನೆ ದೂರೀಕರಿಸಿ, ಮನುಕುಲ ಒಂದೇ ಎಂಬ ಭಾವನೆಯನ್ನು ಮೈಗೂಡಿಸಿಕೊಳ್ಳಬೇಕಾಗಿದೆ. ಸಮಾಜದಲ್ಲಿ ಶಾಂತಿ ಕದಡುವ ಕೆಲಸವನ್ನು ಮಾಡದಿರುವಂತೆ ಕರೆ ನೀಡಿದರು.**

# ನಾಳೆ ಆದಿಚುಂಚನಗಿರಿ ಸ್ವಾಮೀಜಿ 9ನೇ ಪಟ್ಟಾಭಿಷೇಕ ಮಹೋತ್ಸವ



ಆದಿಚುಂಚನಗಿರಿ, ಫೆ.18-ಇಲ್ಲಿನ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ 72ನೇ ಪೀಠಾಧಿಪತಿ ಜಗದ್ಗುರು ಶ್ರೀ ಡಾ. ನಿರ್ಮಲಾನಂದನಾಥ ಸ್ವಾಮೀಜಿಯವರ 9ನೇ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವವನ್ನು ನಾಡಿದ್ದು ದಿನಾಂಕ 20ರ ಭಾನುವಾರ ಬೆಳಗ್ಗೆ 10 ಗಂಟೆಗೆ ಶ್ರೀಕ್ಷೇತ್ರದಲ್ಲಿ ಅತ್ಯಂತ ಸರಳ ಹಾಗೂ ಸಾಂಕೇತಿಕವಾಗಿ ಆಚರಿಸಲಾಗುವುದು ಎಂದು ಶ್ರೀ ಮಠದ ಪ್ರಧಾನ ಕಾರ್ಯದರ್ಶಿ ಶ್ರೀ ಪ್ರಸನ್ನನಾಥ ಸ್ವಾಮೀಜಿ ತಿಳಿಸಿದ್ದಾರೆ.

# ಎನ್‌ಎಸ್‌ಇ ಮಾಜಿ ಸಿ.ಇ.ಒ. ವಿಚಾರಣೆ

ನವದೆಹಲಿ, ಫೆ. 18 - ಎನ್.ಎಸ್.ಇ. ಸೌಲಭ್ಯಗಳಿಗೆ ಸಂಬಂಧಿಸಿದಂತೆ ನಡೆದಿರುವ ಅವ್ಯವಹಾರಕ್ಕೆ ಸಂಬಂಧಿದಂತೆ ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ (ಎನ್.ಎಸ್.ಇ.) ಮಾಜಿ ಸಿಇಒ ಚಿತ್ರ ರಾಮಕೃಷ್ಣ ಅವರನ್ನು ಸಿ.ಬಿ.ಐ. ವಿಚಾರಣೆಗೆ ಒಳಪಡಿಸಿದೆ. ಚಿತ್ರ, ಇನ್ನೋರ್ವ ಮಾಜಿ ಸಿಇಒ ರವಿ ನಾರಾಯಣ ಹಾಗೂ ಮಾಜಿ ಸಿ.ಒ.ಒ. ಆನಂದ್ ಸುಬ್ರಮಣ್ಯಂ ದೇಶ ತೊರೆಯದಂತೆ ನೋಟಿಸ್ ಸಹ ಹೊರಡಿಸಲಾಗಿದೆ. ಷೇರು ಮಾರುಕಟ್ಟೆಯಲ್ಲಿ ಆರಂಭದಲ್ಲೇ ಪ್ರವೇಶ ಪಡೆಯಲು ಎನ್.ಎಸ್.ಇ. ಸೌಲಭ್ಯಗಳ ದುರ್ಬಳಕೆಯಾಗಿದೆ ಎಂದು ಆರೋಪಿಸಲಾಗಿದೆ. ಈ ಬಗ್ಗೆ ದೆಹಲಿಯ ಒ.ಪಿ.ಜಿ. ಸೆಕ್ಯೂರಿಟೀಸ್ ಪ್ರವರ್ತಕ ಸಂಜಯ್ ಗುಪ್ತ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

# ಹರಿಹರ : ಹಿಜಾಬ್‌ಗೆ ಅವಕಾಶ ಕೊಡಿ



**ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳಿಂದ ತಹಶೀಲ್ದಾರ್‌ಗೆ ಮನವಿ**

ಹರಿಹರ, ಫೆ. 18- ನಾವು ಹಿಜಾಬ್ ಧರಿಸದೇ ಇರುವುದಿಲ್ಲ. ನಮಗೆ ಹಿಜಾಬ್ ಧರಿಸಲು ಈ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇವೆ ಎಂದು ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಮುಸ್ಲಿಂ ವಿದ್ಯಾರ್ಥಿಗಳು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಅವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಿಪಿಐ ಸತೀಶ್, ಪಿಎಸ್‌ಐ ಬಸವರಾಜ್ ತೇಲಿ, ಪೊಲೀಸ್ ಸಿಬ್ಬಂದಿಗಳಾದ ಲಿಂಗರಾಜ್, ದೇವರಾಜ್, ಸತೀಶ್, ಮಂಜುನಾಥ್, ವಿದ್ಯಾರ್ಥಿಗಳಾದ ಸುಹಾನಾ ಬಾನು, ಶಹನಾಜ್, ಸಬೀರಾ ಬಾನು ಮತ್ತಿತರರು ಉಪಸ್ಥಿತರಿದ್ದರು.

# ಮಹಾನ್ ಚೇತನಗಳ ಕನಸುಗಳ ಬಗ್ಗೆ ಗೋಡೆ ಬರಹ




ದಾವಣಗೆರೆ, ಫೆ.18- ಇತ್ತೀಚೆಗೆ ರಾಜ್ಯದಲ್ಲಿ ಉಂಟಾಗಿರುವ ಕೋಮು ಸಂಘರ್ಷದ ಹಿನ್ನೆಲೆಯಲ್ಲಿ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ ರಾಜ್ಯ ಸಮಿತಿಯು ವೈಜ್ಞಾನಿಕ-ಧರ್ಮನಿರಪೇಕ್ಷ- ಪ್ರಜಾತಾಂತ್ರಿಕ ಶಿಕ್ಷಣ ನಮ್ಮದಾಗಲಿ ಹಾಗೂ ನೇತಾಜಿ, ಭಗತ್ ಸಿಂಗ್ ಅವರ ಕನಸುಗಳನ್ನು ನನಸಾಗಿಸಲು ಒಂದು ವಿನೂತನ ಮಾದರಿಯ ಪ್ರಚಾರ ಕೈಗೊಂಡಿದೆ.

ರಾಜ್ಯಾದ್ಯಂತ 15 ಕ್ಕು ಹೆಚ್ಚು ಜಿಲ್ಲೆಗಳಲ್ಲಿ ಗೋಡೆ ಬರಹಗಳ ಮೂಲಕ ಪ್ರಜಾತಾಂತ್ರಿಕ, ಧರ್ಮನಿರಪೇಕ್ಷ, ವೈಜ್ಞಾನಿಕ ಆಶಯಗಳನ್ನು ಎತ್ತಿ ಹಿಡಿಯುವ ಪ್ರಯತ್ನ ಮಾಡಲಾಗಿದೆ.

ಶಿಕ್ಷಣ ಹಾಗೂ ರಾಜಕೀಯದಲ್ಲಿ ಧರ್ಮ ಬರಬಾರದು, ಸಾಮಾಜಿಕ ಕಾನೂನುಗಳನ್ನು ರೂಪಿಸುವಲ್ಲಿ ಧರ್ಮಕ್ಕೆ ಯಾವುದೇ ಪಾತ್ರವಿಲ್ಲ ಹಾಗೂ ಮುಂತಾದ ಕೋಮು ಸಾಮರಸ್ಯದ ಕುರಿತು ಸ್ವಾಮಿ ವಿವೇಕಾನಂದ, ಕುವೆಂಪು, ಭಗತ್ ಸಿಂಗ್, ನೇತಾಜಿ ಮುಂತಾದ ಮಹಾನ್ ವ್ಯಕ್ತಿಗಳ ಸೂಕ್ತಿಗಳ ಗೋಡೆ ಬರಹವನ್ನು ಬರೆಯಲಾಯಿತು.

ರಾಜ್ಯದ ವಿದ್ಯಾರ್ಥಿಗಳು, ಪೋಷಕರು, ಉಪನ್ಯಾಸಕರಿಂದ ಈ ಮಾದರಿಯ ಪ್ರಯತ್ನಕ್ಕೆ ಸಕಾರಾತ್ಮಕ ಬೆಂಬಲ ಮತ್ತು ಮೆಚ್ಚುಗೆ ವ್ಯಕ್ತವಾಗುತ್ತಿದೆ.

# ಗ್ರಾಮಾಂತರದಲ್ಲಿಂದು ವಿದ್ಯುತ್ ವ್ಯತ್ಯಯ

ದೊಡ್ಡಬೂದಿಹಾಳ್, ಚಿಕ್ಕಬೂದಿಹಾಳ್, ದೇವರಹಟ್ಟಿ, ಚಿತ್ತಾನಹಳ್ಳಿ, ಬಿ. ಕಲ್ಪನಹಳ್ಳಿ ಶಿವಪುರ, ಭೂಸವ್ವನಹಟ್ಟಿ ಮತ್ತು ಅಮೃತನಗರ, ಯರಗುಂಟೆ, ಕರೂರು, ಅಶೋಕನಗರ ಮತ್ತು ಕೊಂಡಜ್ಜಿ ರೋಡ್, ನೀಲಾನಹಳ್ಳಿ, ದೊಡ್ಡಬಾತಿ, ಹಳೇಬಾತಿ ಮತ್ತು ಗುಡ್ಡದಕ್ಯಾಂಪ್ ಸುತ್ತಮುತ್ತ, ಎಫ್-10 ವಾಟರ್ ವರ್ಕ್ಸ್, ಮಾರ್ಗದ ಮಹಾನಗರ ಪಾಲಿಕೆ ಕುಡಿಯುವ ನೀರಿನ ಘಟಕ, ಎಫ್-20 ಮಾರ್ಗದ ಗ್ರಾಮಗಳಾದ ಅವರಗೊಳ್ಳ, ಕಕ್ಕರಗೊಳ್ಳ ಮತ್ತು ಕೋಡಿಹಳ್ಳಿ ಗ್ರಾಮಗಳಲ್ಲಿ ಇಂದು ಬೆಳಗ್ಗೆ 10 ರಿಂದ ಸಂಜೆ 5.30ರ ವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.


॥ ಶ್ರೀ ಬಸವೇಶ್ವರ ಪ್ರಸನ್ನ ॥

## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ




ದಾವಣಗೆರೆ ವಿದ್ಯಾನಗರ ವಾಸಿಗಳಾದ
ಶ್ರೀಮತಿ ಎಂ.ಜಿ. ಗಂಗಮ್ಮ ಡಿ. ಬುಡ್ಡಪ್ಪ ಮತ್ತು ಮಕ್ಕಳು ಮಾಡುವ ವಿಜ್ಞಾಪನೆಗಳು.
ದಿನಾಂಕ 07.02.2022ನೇ ಸೋಮವಾರ ಬೆಳಿಗ್ಗೆ 7.28ಕ್ಕೆ ನನ್ನ ಪೂಜ್ಯ ಪತಿಯವರಾದ
**ಶ್ರೀ ಡಿ. ಬುಡ್ಡಪ್ಪನವರು**
(ನಿವೃತ್ತ ಸೀನಿಯರ್ ಮ್ಯಾನೇಜರ್ ಕಾರ್ಪೊರೇಷನ್ ಬ್ಯಾಂಕ್, ಮಂಡಿಪೇಟೆ, ದಾವಣಗೆರೆ)
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಸಮಾರಾಧನೆಯನ್ನು**
ದಿನಾಂಕ 19.02.2022ನೇ ಶನಿವಾರ ಬೆಳಿಗ್ಗೆ 12 ಗಂಟೆಗೆ ದಾವಣಗೆರೆ ನಗರದ ಎಂ.ಸಿ.ಸಿ 'ಎ' ಬ್ಲಾಕ್‌ನಲ್ಲಿರುವ ಶ್ರೀ ಕೃಷ್ಣ ಕಲಾ ಮಂದಿರದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು: ಶ್ರೀಮತಿ ಎಂ.ಜಿ. ಗಂಗಮ್ಮ ಡಿ. ಬುಡ್ಡಪ್ಪ ಮತ್ತು ಮಕ್ಕಳು, ಸೊಸೆಯಂದಿರು ಶ್ರೀಮತಿ ಶ್ರೀ ಡಿ.ಬಸವರಾಜ್, ಕೆಪಿಸಿಸಿ ವಕ್ತಾರರು ಮತ್ತು ಸಹೋದರ-ಸಹೋದರಿಯರು ಹಾಗು ಬಂಧು-ಮಿತ್ರರು. ಮೊ: 98440 63773, 94492 23822



॥ ಶ್ರೀಮರುಳಸಿದ್ದೇಶ್ವರ ಪ್ರಸನ್ನ॥

## ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ತಾ॥ ಮತ್ತು ಜಿ॥ ಎಲೆಬೇತೂರು ಗ್ರಾಮದ ವಾಸಿ
ಶ್ರೀಮತಿ ಕಮಲಮ್ಮ ಶ್ರೀ ಬಿ.ಎಂ. ಶೇಖರಯ್ಯ ಮತ್ತು ಸಹೋದರರು ಹಾಗೂ ಮಕ್ಕಳು, ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 24.01.2022ನೇ ಸೋಮವಾರ ರಾತ್ರಿ 9.00 ಗಂಟೆ ಸಮಯಕ್ಕೆ ನನ್ನ ಅಣ್ಣನವರಾದ
**ಶ್ರೀ ಮಠದ ಗುರುಸಿದ್ದಯ್ಯನವರು**
ಮತ್ತು ಅತ್ತಿಗೆಯವರಾದ
**ಶ್ರೀಮತಿ ಸರೋಜಮ್ಮನವರು**
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಶಿವಗಣಾರಾಧನೆ'ಯನ್ನು**
ದಿನಾಂಕ : 20.02. 2022ನೇ ಭಾನುವಾರ ಬೆಳಿಗ್ಗೆ 10.30 ಘಂಟೆಗೆ ಎಲೆಬೇತೂರು ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ, ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ದುಃಖತಪ್ತರು :ಮಕ್ಕಳಾದ: ಶ್ರೀಮತಿ ಭಾಗ್ಯ ಎಂ.ಜಿ, ಶ್ರೀ ಕಲ್ಲೇಶ್ ಮತ್ತು ಮಕ್ಕಳು, ಶ್ರೀಮತಿ ಜ್ಯೋತಿ ಎಂ.ಜಿ., ಶ್ರೀ ನಾಗರಾಜಯ್ಯ ಮತ್ತು ಮಕ್ಕಳು ಶ್ರೀಮತಿ ದೀಪಾ ಎಂ.ಜಿ., ಶ್ರೀ ದೇವರಾಜ್ ಮತ್ತು ಮಕ್ಕಳು ಸಹೋದರರು, ಸಹೋದರಿಯರು ಮತ್ತು ಮಕ್ಕಳು ಹಾಗೂ ಮಠದ ವಂಶಸ್ಥರು, ಬಸವನಾಳ್ ವಂಶಸ್ಥರು, ಎಲೆಬೇತೂರು ಗ್ರಾಮಸ್ಥರು ಹಾಗೂ ಬಂಧು-ಮಿತ್ರರು
ಫೋ. : 98444 68331, 99168 19538, 70198 58660

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


# ಪ್ರವಾಸಿ ತಾಣ ನಂದಿ ಗಿರಿಧಾಮಕ್ಕೆ ರೋಪ್ ವೇ

ಬೆಂಗಳೂರು, ಫೆ. 18- ಚಿಕ್ಕಬಳ್ಳಾಪುರದ ಜನಪ್ರಿಯ ಪ್ರವಾಸಿ ತಾಣ ನಂದಿ ಗಿರಿಧಾಮವನ್ನು ಪ್ರವಾಸೋದ್ಯಮ ತಾಣವಾಗಿ ಬೆಳೆಸುವ ಉದ್ದೇಶದೊಂದಿಗೆ ರೂಪಿಸಿರುವ ರೋಪ್-ವೇ ಯೋಜನೆಗೆ ರಾಜ್ಯ ಸರ್ಕಾರ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಇದರಿಂದಾಗಿ ನಂದಿಬೆಟ್ಟ ಕೆಲವೇ ವರ್ಷಗಳಲ್ಲಿ ಅತ್ಯಂತ ಆಕರ್ಷಣೀಯ ಪ್ರವಾಸಿ ಸ್ಥಳವಾಗಿ ಅಭಿವೃದ್ಧಿಯಾಗಲಿದೆ. ಇದು ಚಿಕ್ಕಬಳ್ಳಾಪುರ ಜಿಲ್ಲೆಯ ಆರ್ಥಿಕಾಭಿವೃದ್ಧಿಯಲ್ಲಿ ಮಹತ್ವದ ಮೈಲುಗಲ್ಲಾಗಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದ್ದಾರೆ.

ಬೆಂಗಳೂರಿನಿಂದ 60 ಕಿ.ಮೀ. ದೂರದಲ್ಲಿರುವ ನಂದಿ ಗಿರಿಧಾಮ ಆಕರ್ಷಣೀಯ ಪ್ರವಾಸಿ ತಾಣವಾಗಿದ್ದು, ಪ್ರವಾಸಿಗರಿಗೆ ವಾರಾಂತ್ಯದಲ್ಲಿ ಭೇಟಿ ನೀಡಲು ಸೂಕ್ತ ಸ್ಥಳವಾಗಿದೆ. ಪಾರಂಪರಿಕ ಸ್ಮಾರಕ, ಕೋಟೆ, ಮನಸ್ಸಿಗೆ ಮುದ ನೀಡುವ ಪರಿಸರದಿಂದಾಗಿ ಇದು ಪ್ರವಾಸಿಗರ ಆಕರ್ಷಣೆಯ ಕೇಂದ್ರಬಿಂದುವಾಗಿದೆ ಎಂದವರು ಹೇಳಿದ್ದಾರೆ.

# ರಾಜೀವ್ ಗಾಂಧಿ ವಿ.ವಿ. ಎಂ.ಡಿ.ಎಸ್.ನಲ್ಲಿ ಆಲನ್ ವಿನ್‌ಸ್ಟನ್‌ಗೆ ಪ್ರಥಮ ರ್‍ಯಾಂಕ್



ದಾವಣಗೆರೆ, ಫೆ. 18 - ನಗರದ ಡಾ. ಡಿ. ಆಲನ್ ವಿನ್‌ಸ್ಟನ್ ಅವರು ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದ ದಂತ ವೈದ್ಯಕೀಯ ವಿಭಾಗದ ಎಂ.ಡಿ.ಎಸ್.ನಲ್ಲಿ ಪ್ರಥಮ ರ್‍ಯಾಂಕ್ ಪಡೆದಿದ್ದಾರೆ. ವಿನ್‌ಸ್ಟನ್ ಅವರು ದಂತ ವೈದ್ಯಕೀಯ ಎಂ.ಡಿ.ಎಸ್.ನ ಎರಡನೇ ಭಾಗದಲ್ಲಿ ಮೊದಲ ರ್‍ಯಾಂಕ್ ಪಡೆದಿದ್ದಾರೆ. ಮೊದಲ ಭಾಗದಲ್ಲಿ ನಾಲ್ಕನೇ ರ್‍ಯಾಂಕ್ ಪಡೆದಿದ್ದಾರೆ. ವಿನ್‌ಸ್ಟನ್ ಅವರು ಸಿವಿಲ್ ಇಂಜಿನಿಯರ್ ದಿ. ಎಸ್. ಡೇವಿಡ್ ಮತ್ತು ಪ್ರೇಮ ರೋಸ್ ದಂಪತಿಯ ಪುತ್ರ.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಸ್‌ಓಜಿ ಕಾಲೋನಿ ಎ,ಬಿ, ಸಿ ಬ್ಲಾಕ್, ಬುದ್ಧ, ಬಸವ, ಭೀಮ ನಗರ, ಕರ್ನಾಟಕ ಬೀಜ ನಿಗಮ, ರಾಮನಗರ, ಇಂಡಸ್ಟ್ರೀಯಲ್ ಏರಿಯಾ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

# ಮಲೇಬೆನ್ನೂರು : ಹಿಜಾಬ್ ತೆರವು ಮಾಡದ ವಿದ್ಯಾರ್ಥಿನಿಯರಿಗೆ ತರಗತಿ ಪ್ರವೇಶ ನಿರಾಕರಣೆ



ಮಲೇಬೆನ್ನೂರು, ಫೆ.18- ಹಿಜಾಬ್ ತೆರವು ಮಾಡಲು ಒಪ್ಪದ 7 ವಿದ್ಯಾರ್ಥಿನಿಯರಿಗೆ ತರಗತಿಗೆ ಹೋಗಲು ಅನುಮತಿ ನೀಡದ ಕಾರಣ ಆ ವಿದ್ಯಾರ್ಥಿನಿಯರು ಮಧ್ಯಾಹ್ನ 1 ಗಂಟೆಯವರೆಗೂ ಕಾಲೇಜು ಬಳಿಯೇ ನಿಂತಿದ್ದ ಘಟನೆ ಶುಕ್ರವಾರ ಇಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನಡೆದಿದೆ.

ಪ್ರಥಮ ಪಿಯುಸಿ ತರಗತಿಗೆ ಅಲ್ಪಸಂಖ್ಯಾತ ವಿದ್ಯಾರ್ಥಿನಿಯರು ಎಂದಿನಂತೆ ಹಿಜಾಬ್ ಧರಿಸಿ ಆಗಮಿಸಿದ್ದರು. ಕೆಲವರು ಹಿಜಾಬ್ ತೆರವು ಮಾಡಿ ತರಗತಿಗೆ ತೆರಳಿದರೆ 7 ವಿದ್ಯಾರ್ಥಿನಿಯರು ಮಾತ್ರ ನಾವು ಹಿಜಾಬ್ ತೆಗೆಯುವುದಿಲ್ಲ ಎಂದು ಹಠ ಮಾಡಿದರು.

ಇದೇ ವೇಳೆಗೆ ಆಗಮಿಸಿದ ಪುರಸಭೆ ಮುಖ್ಯಾಧಿಕಾರಿ ಶ್ರೀಮತಿ ರುಕ್ಮಿಣಿ ಅವರು ವಿದ್ಯಾರ್ಥಿನಿಯರಿಗೆ ಸಾಕಷ್ಟು ತಿಳಿ ಹೇಳಿದರು. ಅಲ್ಲದೇ ಕಾಲೇಜಿನ ಪ್ರಾಚಾರ್ಯ ರಂಗಪ್ಪ, ಹಿರಿಯ ಉಪನ್ಯಾಸಕ ತಿಪ್ಪೇಸ್ವಾಮಿ ಮತ್ತು ಪಿಎಸ್‌ಐ ರವಿಕುಮಾರ್ ಕೂಡಾ ವಿದ್ಯಾರ್ಥಿನಿಯರಿಗೆ ಮನವಿ ಮಾಡಿದರೂ ಒಪ್ಪದಿದ್ದಾಗ ತರಗತಿಗೆ ಪ್ರವೇಶ ನಿರಾಕರಿಸಿದರು.

ಆಗ ಆ ವಿದ್ಯಾರ್ಥಿನಿಯರು ಮಧ್ಯಾಹ್ನ 1 ಗಂಟೆವರೆಗೂ ಮನೆಗೆ ಹೋಗದೇ ಕಾಲೇಜು ಬಳಿಯೇ ನಿಂತಿದ್ದರು. ನಂತರ ಪೋಷಕರು ಬಂದು ತಮ್ಮ ಮಕ್ಕಳನ್ನು ಮನೆಗೆ ಕರೆದುಕೊಂಡು ಹೋದರು.

ದ್ವಿತೀಯ ಪಿಯುಸಿ ವಿದ್ಯಾರ್ಥಿನಿಯರು ಪ್ರಾಯೋಗಿಕ ಪರೀಕ್ಷೆ ಇರುವ ಕಾರಣ ಕಾಲೇಜಿಗೆ ಬಂದಿರಲಿಲ್ಲ. ಕಾಲೇಜಿನ ಸಮಯ ಮುಗಿಯುವವರೆಗೂ ಪೊಲೀಸರು ಭದ್ರತೆ ಒದಗಿಸಿದ್ದರು.






JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte